Reg. No. M. 1550.

"If not delivered please return to "KODAGU" OFFICE MERCARA.

ಕೊಡಗು.

ಸಕ್ಕೇನ ಭೂತದಯೆಯೂ ವಿದ್ಯಾ ವೀತಿ ಪ್ರಯತ್ನಶಾ | ಐಕ್ಯಮಕ್ಕೇನ ದೇಶಾನಾಂ ಸುಸ್ಥಿರಾ ರಾಜ ಸಂಪದಾ

ವಾರ್ಷಿಕ ಚಂದಾ ರೂ. ೩—೮—೦. ಸಂಪಾದಕ—ಪಂದ್ಯಂಡ ಜ. ಬೆಳ್ಯಪ್ಪ.

ಪ್ರತಿ ಶುಕ್ರವಾರ ಪ್ರಾತಃಕಾಲ ಪ್ರಕಟಿಸಲ್ಪಡುವದು.

ಸಂಪುಟ ೧೨ | ಮಡಿಕೇರಿ, ಸನ್ ೧೯೩೩ನೇ ಇಸವಿ ಜನವರಿ ತಾರೀಕು ೧೩ನೇ ಶುಕ್ರವಾರ, | ಸಂಚಿಕೆ ೩೨

SARI-PIN.

EAR-RINGS.
(Thodus)
Cut-rubys Rs. 25 to 50
With diamond in centre Rs. 80 to 120

BRACELETS.

Gold Rs. 10
Set rubys forming any letter Rs. 12

NECKCHAINS.

NOSE-RINGS.
Diamond in small size of best quality Rs. 35 & upwards according to size.

MARRIAGE PRESENTATIONS.

Attractive ahd inexpensive articles ready in stock. Prompt execution. Details on enquiry free with catalogue. Numerous customers in Coorg thoroughly satisfied with reliable service. Testimonials pouring in.
Silver Guindys, Photo lockets, Dimond nose-screws, cut-ruby ear-rings. etc., etc., etc., in all prices. Very attractive. Prices most moderate.

Estimates free on enquiry.

Telegrams: 'PRECIOUS.'

CATALOGUE ON

52–7

V. Subramaniaier
Jeweller,

Designs free on enquiry.

Telephone: 3145.

ENQUIRY.

Post Box 423, Triplicane, P. O., MADRAS.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ನಾವು ನಿಮಗೆ ಭರವಸೆಯನ್ನೀಯುತ್ತೇವೆ.
ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬಿಂಗಳೂರು.

52–18

ಜನರಲ್ ಅಷ್ಯೂರೆನ್ಸ್ ಸೊಸೈಟಿ.

ಆ ಜ ವಿ ರ್.

ನಮ್ಮ ವ್ಯಯವ್ಯಯದ ಪಟ್ಟಿಯೇ ನಮ್ಮ ಅಭಿವೃದ್ಧಿಯನ್ನು ವ್ಯಕ್ತಗೊಳಿಸುತ್ತದೆ.

ವರ್ಷ	ಮೇಲ್ಪಟ್ಟ ವರ್ಷಾದಾಯ	ಮೇಲ್ಪಟ್ಟ ಮೂಲಧನ	ಖರ್ಚು ವರಮಾನದ ಶೇಕಡ
1911	46,248	49,442	82.9
1921	2,92,627	6,53,350	43.2
1931	12,50,000	40,00 000	28.2

ಬೋನಸ್ಸು.

ಕುರ್ತು ನಫೆ ದೊರಕುವ ಜೀವಾವಧಿ ಪಾಲಿಸಿಗಳ ಮೇಲೆ ವರ್ಷ ಒಂದಕ್ಕೆ ಶೇಕಡ 22½

ಚೆನ್ನಾಗಿ ಕೆಲಸಮಾಡಿ ಅಭಿವೃದ್ಧಿ ಸ್ಥಿತಿಯಲ್ಲಿರುವ ಈ ಸೊಸೈಟಿಯಲ್ಲಿ ವಿಮೆ ಮಾಡಿ ಕಡಿಮೆ ಪ್ರೀಮಿಯಂ ಪಾವತಿ ಮಾಡುವ ಸೌಲಭ್ಯ ಹೊಂದಿ ಅಥವಾ ಈ ಕಂಪೆನಿಯ ಪರವಾಗಿ ಕೆಲಸಮಾಡಿ ಉತ್ತಮ ಕಮಿಶನ್ ದರದ ಪ್ರಯೋಜನ ಹೊಂದಿ.

ಹೆಚ್ಚು ವಿಚಾರಗಳಿಗೆ ಈ ವಿಳಾಸಕ್ಕೆ ಬರೆಯಿರಿ:—

ಎ. ರಾಮಚಂದ್ರರಾವ್,
ಸುಪರಿಂಟೆಂಡೆಂಟ್,
ಮಿರ್ಜಿಯೋ ಅಪ್ಪಕ್ಕೆ ಬಳಿ,
ಬೆಂಗಳೂರು.

52–37

ಕೊಡಗು.

ಸನ್ ೧೯೩೩ನೇ ಇಸವಿ

ಜನವರಿ ತಾ. ೧೩ನೇ ಶುಕ್ರವಾರ.

ಪ್ರೆಸ್ ಆಡ್ವೈಸರ್ ಅಗ್ರಲೇಖನ

ನನ್ನು

ಪ್ರಕಟಿಸುವುದಿಲ್ಲ.

ಗಾಂಧೀ—ಜಾಮೊರಿನರೊಳಗಿನ ಪತ್ರವ್ಯವಹಾರ.

ಗಾಂಧೀ—ಜಾಮೊರಿನರೊಳಗೆ ದೇವಾಲಯ ಪ್ರವೇಶದ ಕುರಿತಾಗಿ ನಡೆದ ಪತ್ರವ್ಯವಹಾರವು ಈಗ ಪ್ರಕಟವಾಗಿದೆ. ದಶಂಬರ ತಾ ೨೪ ರಲ್ಲಿ ಗಾಂಧಿಜಿಯವರು ಜಾಮೊರಿನರಿಗೆ ಈ ಕೆಳಗಿನ ಅಭಿಪ್ರಾಯವಿರುವ ತಂತಿಬಿಟ್ಟರು:—

'ಗುರುವಾಯ್ಯೂರು ದೇವಾಲಯದಲ್ಲಿ ವರ್ಷದ ಮೂರು ದಿನಗಳಲ್ಲಿ ಎಲ್ಲ ಹಿಂದುಗಳಿಗೆ ಸ್ಪೃಶ್ಯಾಸ್ಪೃಶ್ಯ ಭೇದವಿಲ್ಲದೆ ಪ್ರವೇಶ ದೊರೆವುದೆಂದು ಕೇಳಿದೆ. ಇದು ನಿಜವೇ?—ಗಾಂಧಿ'.

ಜಾಮೊರಿನರಿಂದ ಈ ಕೆಳಗಿನಂತೆ ಉತ್ತರ ಕಳುಹಲಾಗಿದೆ:—

'ಪ್ರತಿ ವರ್ಷ ಹರಿಜನರಿಗೂ, ಇತರ ಹಿಂದುಗಳಂತೆ ಗುರುವಯ್ಯೂರು ದೇವಾಲಯಕ್ಕೂ ಪ್ರವೇಶಿಸಗುತ್ತಿರುವುದು ನಿಜವೇ ? ಎಂದು ನಿಮ್ಮ ಪ್ರಶ್ನೆ. ಇಲ್ಲ—ನಿಮಗೆ ದೊರೆತ ವರ್ತಮಾನವು ತೀರ ಸುಳ್ಳು. ಯಾವ ದಿನದಲ್ಲೂ ಅಸ್ಪೃಶ್ಯರಿಗೆ ಈ ದೇವಾಲಯವನ್ನು ಪ್ರವೇಶಿಸುವ ಹಕ್ಕು ಇಲ್ಲ. ಆದರೆ, ಕಾರ್ತಿಕ ಏಕಾದಶಿಯ ದಿನ ಸಾವಿರಾರು ಜನರು ಹಿಂಡು ಹಿಂಡಾಗಿ ದೇವದರ್ಶನಕ್ಕೆ ಬರುತ್ತಿರುವಲ್ಲಿ, ಅಸ್ಪೃಶ್ಯರು ಕೆಲವರು ಆ ಹಿಂಡಿನೊಳಗೆ ಯಾರಿಗೂ ತಿಳಿಯದಂತೆ ನುಸುಳಿ ದೇವದರ್ಶನ ಪಡೆಯುತ್ತಿರಬಹುದು ಹೀಗಾಗಬಹುದೆಂಬ ಊಹೆಯಿಂದ, ಅಂತಹ ಏಕಾದಶಿಯ ಮರುದಿನ ದೇವಸ್ಥಾನದಲ್ಲಿ ಶುದ್ಧಿಸಂಪ್ರೋಕ್ಷಣಾದಿಗಳು ನಡೆಸಲ್ಪಡುತ್ತವೆ. ಇದರ ಹೊರತು ಯಾವ ದಿನದಲ್ಲೂ ಅಸ್ಪೃಶ್ಯರ ಪ್ರವೇಶವಾಗುವುದು ಅಸಂಭವ. ಅಸ್ಪೃಶ್ಯರು ಈ ದೇವಾಲಯವನ್ನು ಪ್ರವೇಶಿಸುವುದಿಲ್ಲ. ಈ ಸಂಬಂಧವಾಗಿ, ಕಳೆದ ಜೂನ್ ತಿಂಗಳಲ್ಲಿ ಮದರಾಸು ಹೈಕೋರ್ಟಿನ ಜಸ್ಟೀಸ್ ರಮೇಶಮ್ ಪಂತುಲುರವರು ಕೊಟ್ಟ ತೀರ್ಪಿನ ನಕಲನ್ನು ಓದಿರಿ.'

ಗಾಂಧಿಜಿಯವರು ಉತ್ತರವಾಗಿ, ಇದೇ ತಾ. ೧೧ ರಲ್ಲಿ ಜಾಮೊರಿನರಿಗೆ ಈ ರೀತಿ ಬರೆದಿರುವರು:

'ಪ್ರಿಯ ಬಂಧು—ನಿಮ್ಮ ಪತ್ರಕ್ಕಾಗಿ ವಂದನೆಗಳು. ನಿಮ್ಮ ಪತ್ರವನ್ನೋದಿ ದುಃಖ--ಆಶ್ಚರ್ಯಗಳು ಒಮ್ಮೆಯೇ ಉಂಟಾದುವು. ಇಂತಹ ಧಾರ್ಮಿಕ ವಿಚಾರಗಳಲ್ಲಿ ಎರಡು ಕಡೆಯಿಂದಲೂ ಪರಸ್ಪರ ಸತ್ಯ-ಸಾಮ್ಯತೆ ಔದಾರ್ಯಗಳನ್ನು ನಾನು ನಿರೀಕ್ಷಿಸುವೆನು. ಕೊನೆಯದನ್ನು ನಾನು ನಿಮ್ಮ ಪತ್ರದಲ್ಲಿ ಕಾಣಲಾರದಾದೆ. ಕಾರ್ತಿಕ ಏಕಾದಶಿ ದಿನದಲ್ಲಿ ಯಾವನಾದರೂ 'ಅಸ್ಪೃಶ್ಯ'ನನ್ನು ನೀವು ಹಿಂದೆ ದಬ್ಬಿ ಕಳುಹಿಡುದಿದೆಯೆ ? ಸಾವಿರವಲ್ಲವಾದರೂ ನೂರಾರು ಮಂದಿ 'ಅಸ್ಪೃಶ್ಯ' ಸ್ತ್ರೀ—ಪುರುಷ—ಬಾಲರು ಪ್ರತಿ ಏಕಾದಶಿಯಲ್ಲಿ ದೇವಾಲಯವನ್ನು ಪ್ರವೇಶಿಸುವರೆಂಬುದು ನಿಜವಷ್ಟೆ; ಇವರಲ್ಲಿ ಕೆಲವರನ್ನಾದರೂ ಪತ್ತೆಹಿಡಿಯುವುದು ಕಷ್ಟವಾಗಲಾರದು. ನಾನು ತಿಳಿದಂತೆ, ಅಸ್ಪೃಶ್ಯರು ಆ ಒಂದು ದಿನದಲ್ಲಿ ಪ್ರವೇಶದ ಹಕ್ಕಿನ ಸದುಪಯೋಗ ಮಾಡಿಯೇ ದೇವಾಲಯವನ್ನು ಪ್ರವೇಶಿಸುತ್ತಿರುವರಂತೆ.

ಜಸ್ಟೀಸ್ ರಮೇಶಮ್‌ರವರ ತೀರ್ಪಿನ ನಕಲನ್ನು ನೋಡುವಂತೆ ಹೇಳಿರುತ್ತೀರಿ. ಆ ತೀರ್ಪಿನ ನಕಲಿನಂತೆ ತೋರುವುದೇನೆಂದರೆ;—ಅರ್ಥಾತ್ ಕಾರ್ತಿಕ ಏಕಾದಶಿಯ ದಿನ ಅಸ್ಪೃಶ್ಯರು ಮರೆಮಾಜದೆ ಬಹಿರಂಗವಾಗಿಯೆ ಹಕ್ಕಿನಿಂದಲೇ ದೇವಾಲಯವನ್ನು ಪ್ರವೇಶಿಸುತ್ತಿರುವರೆಂದು. ಆ ತೀರ್ಪಿನ ನಕಲಿನಲ್ಲಿರುವುದಿಷ್ಟು:—'ಗುರುವಾಯ್ಯೂರು ದೇವಾಲಯವು ಖಾಸಗಿ ಸೊತ್ತಾಗಿರದೆ ಸರ್ವಜನಿಕವಾಗಿದ್ದು, ರೂಢಿಯಲ್ಲಿರುವ ಆ ದೇವಾಲಯದ ಕಾಯಿದೆ-ನಿಬಂಧನೆಗಳಿಗನುಸರಿಸಿ ಪ್ರತಿಯೊಬ್ಬ ಹಿಂದುವಿಗೂ ಅಲ್ಲಿ ಪ್ರವೇಶಿಸುವ ಹಕ್ಕಿದೆ. ಮೇಲ್ಜಾತಿಯವರಿಗೆ ದೇವಾಲಯ ಪ್ರವೇಶದ ಹಕ್ಕು ವರ್ಷದ ಮುನ್ನೂರರುವತ್ತೈದು ದಿನವೂ ಇದೆ. ಆ ಕಾರಣದಿಂದ ದೇವಳದ ರಸ್ತೆಗಳಲ್ಲಿ ಅವರು ನಿರಾತಂಕವಾಗಿ ತಿರುಗಾಡಬಹುದು. ಕೀಳು ಜಾತಿಯವರಿಗೆ ಕಾರ್ತಿಕ ಏಕಾದಶಿ ದಿನದಲ್ಲಿ ಮಾತ್ರ ಪ್ರವೇಶದ ಹಕ್ಕು ಇದೆ; ಆ ಒಂದು ದಿನದಲ್ಲಿ ಅವರು ದೇವಾಲಯದ ಮೂರ್ಗಗಳಲ್ಲಿ ನಡೆಯಬಹುದು; ಇತರ ದಿನಗಳಲ್ಲಿ ಕೂಡದಾಗಿದೆ. ಇದು ಅನಾದಿಯಿಂದ ನಡೆದುಬಂದುದಾಗಿದೆ. ಇದಿಷ್ಟು ಜಸ್ಟೀಸ್ ಕಮೊಶನ್‌ರವರ ತೀರ್ಪಿನ ಅಭಿಪ್ರಾಯ. ಆ ದೇ ತೀರ್ಪಿನಲ್ಲಿ,—'ಕೀಳುಜಾತಿಯವರೂ ಹಿಂದುಗಳೇ ಆಗಿರುವರೆಂಬ ಕಾರಣದಿಂದಲೇ ವರ್ಷದಲ್ಲೊಂದು ದಿನ ಅವರಿಗೆ ಪ್ರವೇಶ ದೊರೆಯುತ್ತಿದೆ ಎಂದು ನನ್ನ ಮತ. ಯಾರು ಯಾವ ಜಾತಿಯವರೆಂದು ಗುರುತಿಸುವುದಸಾಧ್ಯವೆಂಬುದೂ ಬರೇ ನೆವನ ಮಾತ್ರವಾಗಿದೆ' ಎಂದೂ ಅಭಿಪ್ರಾಯವಿದೆ.

ಈ ಎಲ್ಲವುಗಳಿಂದ, ಕಾರ್ತಿಕ ಏಕಾದಶಿ ದಿನದಲ್ಲಿ ಅಸ್ಪೃಶ್ಯರಿಗೆ ನಿರಾತಂಕವಾಗಿ ಪ್ರವೇಶದೊರೆಯುತ್ತಿದೆಯೆಂದು ಸುಸ್ಪಷ್ಟ. ಈ ವಿಷಯವು ವಿಶೇಷವೆಂದೇ ಪತ್ರಿಕೆಗಳಲ್ಲಿ ಪ್ರಕಟನೆಗಾಗಿ ಕಳುಹಿಸಿರುತ್ತೇನೆ. (ಸಹಿ) ಗಾಂಧಿ.

ಕೊಡಗಿನ ಭವಿಷ್ಯತ್ತು.

(ದೇಶಸ್ಥನಿಂದ)

ಕಳೆದ ವಾರ ಈ ಪತ್ರಿಕೆಯಲ್ಲಿ 'ಬರೆದು ಬಂದದ್ದು' ಎಂಬುದಾಗಿ ಕೊಡಗಿನ ಭವಿಷ್ಯತ್ತನ್ನು ಕುರಿತು ಲೇಖನದ ಅಂಶಗಳು ದೇಶದ ಅಭಿಪ್ರಾಯವನ್ನು ಸೂಚಿಸಿರುವುದಿಲ್ಲ. ತಾರೀಕು 18—12—1932ರಲ್ಲು ಕೊಡಗು ಜಮೀನ್ದಾರರ ಸಂಘದ ಹಾಲ್‌ನಲ್ಲಿ ನಡೆದ ಸರ್ವಪಕ್ಷೀಯ ಪರಿಷತ್ತಿನಲ್ಲಿ ತೀರ್ಮಾನಿಸಿದಂತೆ ಕೊಡಗಿಗೆ ಸಂಪೂರ್ಣ ಜವಾಬ್ದಾರಿಯ ಸರ್ಕಾರವನ್ನು ಕೊಡದಿದ್ದ ಪಕ್ಷ ನಮ್ಮ ಹಕ್ಕುಗಳನ್ನು ತಿಳಿಸಿಕೊಂಡು ಮೈಸೂರು ಸಂಸ್ಥಾನದ ಒಂದು ಜಿಲ್ಲೆಯಾಗಿ ಕೊಡಗನ್ನು ಕೂಡಲೇ ಸೇರಿಸಬೇಕೆಂತ ಮಾಡಿದ ತೀರ್ಮಾನಕ್ಕೆ ದೇಶದ ಸರ್ವರೂ ಒಪ್ಪತಕ್ಕ ವಿಷಯವಾಗಿದೆ. 'ಬರೆದು ಬಂದದ್ದು' ಎಂಬ ಲೇಖನದಲ್ಲಿ ಸದ್ಯದಲ್ಲಿ ಕೊಡಗಿಗೆ ಸಂಪೂರ್ಣ ಜವಾಬ್ದಾರಿಕೆಯ ಸರ್ಕಾರವನ್ನು ಕೊಡಬೇಕಂತಲೂ, ಮೈಸೂರಿಗೋ, ಮದ್ರಾಸಿಗೋ ಸೇರಿಸಕೂಡದೆಂತ ಹೇಳುವವರು ಅನಂತರ ಆಲೋಚಿಸಬಹುದೆಂತ ಹೇಳುವದು ನ್ಯಾಯವಲ್ಲ. ಕೊಡಗು ಪ್ರತ್ಯೇಕವಾದಷ್ಟು ದಿವಸ ಸಂಪೂರ್ಣ ಜವಾಬ್ದಾರಿಕೆಯ ಸರ್ಕಾರವನ್ನು ಯಾವ ವಿಧದಿಂದಲಾದರೂ ಕೊಡಲಿಕ್ಕೆ ಸಾಧ್ಯವಿಲ್ಲವೆಂತ ಸ್ಥಳೀಯ ಸರ್ಕಾರದವರ ಅಭಿಪ್ರಾಯವಾಗಿರುವಾಗ್ಯೆ, ದೇಶದವರು ಪುನಹ ಅದನ್ನೇ ಕೊಡಿ ಎಂತ ಕೇಳುತ್ತಾ ಜೇರೆ ದೊಡ್ಡ ಪ್ರಾಂತ್ಯಕ್ಕೆ ಸೇರಿ ನಮ್ಮ ಚಿಕ್ಕ ದೇಶವನ್ನು ಆದಷ್ಟು ಜಾಗರೂಕತೆಯಿಂದ ಅಭಿವೃದ್ಧಿಗೊಳಿಸೋಣ ಎಂಬ ಸುಧಾರಣೆಯನ್ನು ಆ ಮೇಲೆ ಆಲೋಚಿಸಬಹುದೆಂತ ಬರೆದ 'ಬರೆದು ಬಂದದ್ದು' ಎಂಬ ಲೇಖನಕ್ಕೆ ನಾವು ಎಷ್ಟರ ಮಟ್ಟಿಗೆ ಗಮನ ಕೊಡಬಹುದು. ರಾಜನೀತಿಯ ಪ್ರಶ್ನೆಗಳಲ್ಲಿ ಶೇಕಡ ನೂರರಷ್ಟು ಒಮ್ಮತದ ಅಭಿಪ್ರಾಯ ಸಿಕ್ಕಲು ಬ್ರಹ್ಮ ದೇವರೇ ಬಂದರೂ ಸಾಧ್ಯವಾಗಲಿಕ್ಕಿಲ್ಲವೆಂತ ನನ್ನ ಭಾವನೆ. ಹಾಗಿದ್ದ ಮೇಲೆ ಕೆಲವು ಸ್ವಾರ್ಥಪರರು ಆದೆಷ್ಟೋ ಕಾರಣಗಳಿಂದ ದೇಶದ ಉದ್ಧಾರಕ್ಕಾಗಿ ಯಾವ ತರದ ಉನ್ನತ ರೀತಿಯ ತೀರ್ಮಾನವನ್ನು ಮಾಡಿದರೂ ಅಂಥಾದ್ದನ್ನು ವಿರೋಧಿಸುವುದೇ ತಮ್ಮ ಧ್ಯೇಯವೆಂದೂ ತತ್ವವೆಂದೂ, ವರ್ತಿಸಿ ಭಿನ್ನಾಭಿಪ್ರಾಯಕ್ಕೆ ಎಡೆಕೊಡುವ ಜನರ ಮತಿಗೆ ಯಾವ ವ್ಯಾಮುಖ್ಯತೆಯನ್ನಾದರೂ ಕೊಡುವುದು ತಪ್ಪು. ಕಳೆದ ಸರ್ವ ಪಕ್ಷೀಯ ಪರಿಷತ್ತಿನಲ್ಲಿ ಕಾಂಗ್ರೆಸಿನವರ ಗುಂಪಲ್ಲದೆ, ದೇಶದ ಎಲ್ಲಾ ರಾಜಕೀಯಸಂಸ್ಥೆಗಳೂ ಮತ್ತು ಇತರ ಅನೇಕ ಮುಂದಾಳುಗಳೂ ಕೂಡಿ ತೀರ್ಮಾನಿಸಿದ ತರಾವು ಇಡೀ ದೇಶದವರ ಬಹುಮತದ ಅಭಿಪ್ರಾಯವೆಂದು ಸರ್ಕಾರದವರೂ, ಮತ್ತು ದೇಶದವರೂ ತಿಳಿದಿರತಕ್ಕದ್ದು.

ಕೊಡಗಿಗೆ ಸಂಪೂರ್ಣ ಜವಾಬ್ದಾರಿಕೆಯ ಸರ್ಕಾರವನ್ನು ಕೊಡದಿದ್ದ ಪಕ್ಷ ನಮ್ಮ ಹಕ್ಕುಗಳನ್ನು ತಿಳಿಸಿಕೊಂಡು ಮೈಸೂರು ಸಂಸ್ಥಾನದ ಒಂದು ಜಿಲ್ಲೆಯಾಗಿ ಸೇರಿಸಬೇಕೆಂಬ ಪ್ರಶ್ನೆಯು ಸಹ ಒಟ್ಟಿಗೆ ಎದುರ್ಸಿಸಿ ತೀರ್ಮಾನಿಸಬೇಕಾದದ್ದು, ದೇಶದ ಹಿತವನ್ನು ಬಯಸುವ ಬ್ರಿಟಿಷ್ ಅಧಿಕಾರಿಗಳ ಕರ್ತವ್ಯವಾಗಿದೆ. ಈ ಸಂದರ್ಭದಲ್ಲಿ ಈಗ ಬ್ರಿಟಿಷ್ ಆಧಿಪತ್ಯದ ಲಾರ್ಡ್ ಚಾನ್ಸ್‌ಲರ್ (Lord Chancellor) ಆಗಿರುವ ಲಾರ್ಡ್ ಸೇಂಕಿ (Lord Sankey) ಯವರು ಮೈಸೂರು ಅಡಳಿತವನ್ನು ಕುರಿತು ಮೈಸೂರು ಅಡಳಿತವು ಇಂಡಿಯಾ ದೇಶಕ್ಕೆ ಮಾತ್ರವಲ್ಲ ಇಡೀ ಭೂಲೋಕಕ್ಕೆ ಒಂದು ಮಾದರಿಯಾಗಿದೆ ಎಂತ ಕಳೆದ ದುಂಡು ಮೇಜದ ಪರಿಷತ್ತಿನಲ್ಲಿ ಹೇಳಿದ್ದಾರೆಂತ ನಮ್ಮ ದೇಶದವರಿಗೆ ತಿಳಿಸುವುದು ನನ್ನ ಕರ್ತವ್ಯವಾಗಿದೆ' ಮೈಸೂರು ಅಡಳಿತಕ್ಕೆ ಇಷ್ಟು ಯೋಗ್ಯವಾದ ಬಹುಮಾನ ಪತ್ರ ಸಿಕ್ಕಿದ ಮೇಲೆ ಕೊಡಗು ದೇಶವು ಮೈಸೂರು ಸಂಸ್ಥಾನದ ಒಂದು ಭಾಗವಾಗಿ ಸೇರುವುದು ನಮ್ಮ ದೇಶದ ಅಭಿವೃದ್ಧಿಗೆ ಸಹಜವಾದ ಮತ್ತು ಉನ್ನತ ರೀತಿಯ ದಾರಿಯೆಂತ ಹೇಳಬೇಕಾಗಿದೆ. ಮೇಲೆ ಹೇಳಿದಂತೆ ಭಿನ್ನಾಭಿಪ್ರಾಯವನ್ನು ಹುಟ್ಟಿಸುವ ಮಹನೀಯರು ಈ ಪ್ರಶ್ನೆಯನ್ನು ಚೆನ್ನಾಗಿ ಪರಿಶೋಧಿಸಿ ಕೊಡಗಿನ ಈಗಿನ ಸ್ಥಿತಿಯನ್ನು ಚೆನ್ನಾಗಿ ಅರಿತು, ಒಗ್ಗಟ್ಟಿನ ತೀರ್ಮಾನವನ್ನು ಪುಷ್ಟೀಕರಿಸಬೇಕೆಂತ ನನ್ನ ವಿನಂತಿ.

ಲಕ್ನೋ ಸ್ತ್ರೀಸಮ್ಮೇಳನ.

ನಮ್ಮ ದೇಶದ ಸ್ತ್ರೀಯರು ಎಷ್ಟರ ಮಟ್ಟಿಗೆ ಪ್ರಗತಿಪೂರ್ಣದಲ್ಲಿ ಮುಂದುವರೆಯುತ್ತಿದ್ದಾರೆ, ಅವರ ಆಶೋತ್ತರಗಳು ಎಷ್ಟರ ಮಟ್ಟಿಗಿವೆ ಎಂಬುದನ್ನು ತಿಳಿಯಲು ಕಳೆದ ವಾರ ಲಕ್ನೋದಲ್ಲಿ ಸೇರಿದ್ದ ಸ್ತ್ರೀ ಸಮ್ಮೇಳನದಲ್ಲಿ ಪಾಸಾದ ತರಾವುಗಳನ್ನು ನೋಡಬೇಕು.

"ಪುರುಷರಿಗಿರುವಷ್ಟು ಸ್ವಾತಂತ್ರ್ಯವೇ ನಮಗೂ ಇರಬೇಕು" ಎಂದು ಅಲ್ಲಿ ಸೇರಿದ್ದವರು.

ಶ್ರೀಮತಿ ಮುತ್ತುಲಕ್ಷ್ಮಿರೆಡ್ಡಿಯವರು ಮತ್ತೊಂದು ತರಾವು ತಂದಿದ್ದರು.

"ಗಂಡಸರು—ಹೆಂಗಸರು ಎಲ್ಲರೂ ಸಂತತಿ ಪ್ರತಿಬಂಧಕ ವಿಧಾನಗಳನ್ನು ತಿಳಿದುಕೊಳ್ಳಬೇಕು" ಎಂದು.

ಕೆಲವು ಡೆಲಿಗೇಟುಗಳಿಗೆ ಈ ತರಾವು ಯಾಕೊ ಮನಸ್ಸಿಗೆ ಒಪ್ಪಲಿಲ್ಲ.

"ಇದನ್ನು ಕಲಸಬಾರದು. ಕಲಿಸಿದರೆ ಭೋಗೇಚ್ಛೆಯನ್ನು ಪ್ರೋತ್ಸಾಹಿಸಿದ ಹಾಗಾಗುವುದು" ಎಂದು. ಆದರೇನು? ಹಾಗಂದವರು ಎಲ್ಲಿಯೊ ಸ್ವಲ್ಪ ಮಂದಿ. ವೋಟಿಗೆ ಹಾಕಿ ನೋಡಲು ತರಾವು ಮಂಜೂರಾತಿಗೆ ಆಯಿತು!

ಇಷ್ಟೆ ಅಲ್ಲ. ಕೆಲವು ಹಸ್ತ ಪತ್ರಿಕೆಗಳನ್ನು ಹಂಚಿದರು. ಅದರಲ್ಲಿ "ನಮಗೆ ವಿವಾಹ ಮತ್ತು ಸಾಮಾಜಿಕ ಹಕ್ಕುಗಳಲ್ಲಿ ಸರಿಸಮಾನವಾದ ಹಕ್ಕುಗಳಿರಬೇಕು ಪತಿಯನ್ನು ತ್ಯಜಿಸುವ ವಿವಾಹ ವಿಚ್ಛೇದದ ಹಕ್ಕಿರಬೇಕು" ಎಂಬುದೆಲ್ಲಾ ನಮೂದಾಗಿದ್ದಿತು.

ಅಂತು, ಸ್ತ್ರೀ ಸ್ವತಂತ್ರಸಾಧಕ ಸಂಘವು ಬೇಕಾದಷ್ಟು ಪ್ರಯತ್ನ ಪಡುತ್ತಿದೆ ಸ್ವಾತಂತ್ರ್ಯಕ್ಕಾಗಿ.

ಮಿ. ಬರ್ನಾಡ್ ಷಾ ರವರ ಆಗಮನ.

ಗಾಂಧಿಯವರ ಬಗ್ಗೆ ಪ್ರಶಂಸೆ—ಪತ್ರಿಕೋದ್ಯೋಗಿಗಳಿಗೆ ಮೂರು ಕಿವಿಮಾತುಗಳು.

(ಎ ಪಿ. ಐ. ತಂತಿ) ಬೊಂಬಾಯಿ ಜ ೮

ಕೆನೇಡಿಯನ್ ಪೆಸಿಫಿಕ್ ಲೈನರ್ ಕಂಪೆನಿಗೆ ಸೇರಿದ 'ಎಂಪ್ರೆಸ್ ಆಫ್ ಬ್ರಿಟನ್' ಎಂಬ ಜಹಜು ಬೊಂಬಾಯಿಗೆ ಈ ಪ್ರಾತಃಕಾಲ ಬಂದಿತು.

ಈ ಜಹಜಿನಲ್ಲಿದ್ದ ಪ್ರಯಾಣೀಕರ ಪೈಕಿ ಮುಖ್ಯರಾದವರು ಮಿ. ಬರ್ನಾರ್ಡ್ ಷಾ ರವರು.

ಮಿ. ಷಾ ರವರು ಜಹಜಿನಿಂದ ಇಳಿದ ಕೂಡಲೇ ಪತ್ರಿಕಾ ಪ್ರತಿನಿಧಿಗಳು ಅವರನ್ನು ಮುತ್ತಿದ್ದರು ಹಿಂದೂಸ್ಥಾನದ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಅದರಲ್ಲೂ ಬೊಂಬಾಯಿ ಪೌರಸಭೆಯ ಕೆಲಸ ಕಾರ್ಯಗಳ ಬಗ್ಗೆ ಮಿ ಬರ್ನಾರ್ಡ್ ಷಾ ರವರು ಪ್ರಶ್ನೆ ಹಾಕಿದರು. "ಒಬ್ಬ ಆಂಗ್ಲೇಯ ರಾಜಕಾರಣ ಮುಖಂಡರು ಹೇಳಿದಂತೆ ಆಂಗ್ಲೇಯ ಅಸ್ಪೃಶ್ಯತೆಯ ಬಗ್ಗೆ ನಾನು ಸಂಬಂಧಪಟ್ಟಿರುವೆನು. ಕೆಲಸಗಾರನು ಡಜನ್‌ಗಳ ಮತ್ತು ಬಂಡವಾಳಗಾರರ ದೃಷ್ಟಿಯಲ್ಲಿ ಅಸ್ಪೃಶ್ಯನಂತಿರುವನು. ಒಬ್ಬ ಡಜನ್ ಸ್ತ್ರೀಯು ತನ್ನ ವೇಲೆ ಕೆಲಸಗಾರನ ನೆರಳು ಬಿದ್ದಿತೆಂದರೆ ಪ್ರತಿಭಟಿಸುವುದಿಲ್ಲ. ಆದರೆ ಅವರ ಮಗಳನ್ನು ಮದುವೆಯಾಗಬೇಕೆಂದು ಅಪೇಕ್ಷಿಸಿದರೆ, ಕೂಡಲೇ ತಾನು ಅಸ್ಪೃಶ್ಯನಾಗುವನು." ಎಂದು ಬರ್ನಾರ್ಡ್ ಷಾ ರವರೇ ಹೇಳಿದರು. ಪತ್ರಿಕಾ ಪ್ರತಿನಿಧಿಗಳು ಅನೇಕ ಪ್ರಶ್ನೆಗಳನ್ನು ಕೇಳಿದರು ಆ ಪ್ರಶ್ನೋತ್ತರಗಳು ಈ ಪ್ರಕಾರ ಇವೆ

ಪ್ರ- ಇಂಡಿಯಾದ ಮತ್ತು ಬ್ರಿಟನ್ನಿನ ಮುಂದಿನ ಬಾಂಧವ್ಯವೇನೆಂದು ಹೇಳುವಿರಿ ?

ಉ- ಇಂದಿನ ವರೆಗೆ ವಿಶ್ವಾಸ್ಯವಾಗಿರುವ ಕೆಡಕುಗಳೇ ಸಾಕು. ಭವಿಷ್ಯದ ಬಗ್ಗೆ ನಾನೇನೂ ಹೇಳುವುದಿಲ್ಲ. ಪರಸ್ಪರ ಬಾಂಧವ್ಯವೇ ಇಲ್ಲವಾಗುವ ಸಂಭವವು ಬಂದರೂ ಬರಬಹುದು. ಸಂಖ್ಯೆಯನ್ನು ಗಮನಿಸಿದರೆ ಬ್ರಿಟಿಷ್ ಜಕಾತ್ಯಧಿಪತ್ಯದಲ್ಲಿ ಇಂಗ್ಲೆಂಡು ಅತಿ ಸಣ್ಣದಾಗಿದೆ. ಒತ್ತಟ್ಟಿಗೆ ಪರಾಕೀಲಿಸಿದರೆ ಹಿಂದೂಸ್ಥಾನವು ಬ್ರಿಟಿಷ್ ಜಕಾತ್ಯಧಿಪತ್ಯದಲ್ಲಿ ವೈಧ್ಯ ಸ್ಥಾನವನ್ನು ಹೊಂದಿದೆ. ಅದು ಬ್ರಿಟಿಷ್ ಜಕಾತ್ಯಧಿಪತ್ಯಕ್ಕೆಸ್ಕ ಜಕಾತ್ಯಧಿಪತ್ಯವಲ್ಲ. ಅದು ಹಿಂದೂ ಜಕಾತ್ಯಧಿಪತ್ಯ. ಸ್ವಲ್ಪ ಮಟ್ಟಿಗೆ ಮುಸ್ಲಿಂ ಜಕಾತ್ಯಧಿಪತ್ಯವೆಂದೂ ಹೇಳಬಹುದು ಹಿಂದೂಸ್ಥಾನದ ಪರಿಸ್ಥಿತಿಯು ಉತ್ಕೃಷ್ಟವಾದರೆ ಮುಸ್ಲಿಂ, ಹಿಂದೂಸ್ಥಾನದ ಜನರ ತಿಳುವಳಿಕೆಯು ಬೆಳೆದರೆ ಇಂಗ್ಲೆಂಡಿನಿಂದ ಬೇರೆಯಾಗಬೇಕೆಂದು ಇಂಡಿಯಾ ಅಪೇಕ್ಷಿಸುವದು ಹೊಗಿರಲಿ, ಇಂಡಿಯಾದಿಂದಲೇ ಬೇರೆಯಾಗಲು ಇಂಗ್ಲೆಂಡು ತಾನಾಗಿಯೇ ಒದ್ದಾಡುವುದು.

ಪತ್ರಿಕೋದ್ಯೋಗಿಗಳೊಬ್ಬರು ಮೂತನಾಡುತ್ತ ಅವಕಾಶವಿಲ್ಲದುದರಿಂದ ಇಂಡಿಯಾದಲ್ಲಿ ಮೆದುಳಿನ ಪ್ರಭಾವವು ಸ್ವಸಂಸಿಲ್ಲವೆಂದು ಹೇಳಿದರು.

ಮಿ ಷಾರವರು ಈ ಪ್ರಕಾರ ಜವಾಬಿತ್ತರು. 'ಮೆದುಳಿನ ಪ್ರಭಾವವು ತಪ್ಪೆಂದು ನಿಮಗೆ ಗೊತ್ತಿದ್ದರೂ ಗೊತ್ತಿರಬಹುದು. ಇಂಗ್ಲೆಂಡೂ ಮೆದುಳಿನ ಪ್ರಭಾವವಿಲ್ಲದೆ ಮುಂದೆ ಸಾಗಿದೆ"

ಪತ್ರಿಕೋದ್ಯೋಗಿಗಳು ಇನ್ನು ಬೇರೆ ಪ್ರಶ್ನೆಗಳನ್ನು ಹಾಕಿದರು.

ಪ್ರ- ನೀವು ಗಾಂಧಿಯವರನ್ನು ಕಾಣುವಿರೋ ? ಅವರ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು ?

ಉ- ನಾನು ಇಂಗ್ಲೆಂಡಿನಲ್ಲಿ ಅವರನ್ನು ನೋಡಿದೆನು. ಅವರೊಬ್ಬ ತಲೆ ಕೆಡಿಸಿಕೊಳ್ಳದ ನಿಷ್ಕಲ್ಮಷ ವ್ಯಕ್ತಿಯೆಂದು ನಾನು ತಿಳಿದಿರುವೆನು. ಆದರೆ ನಾನು ಬೊಂಬಾಯಿಯಲ್ಲಿ ನೋಡಿದವರೆಲ್ಲರೂ ಗಾಂಧಿಗಳೆಲ್ಲವೆಂದು ಹೇಳುತ್ತೇನೆ. ಗಾಂಧೀಜಿಯವರಂತಹ ವ್ಯಕ್ತಿಗಳು ಸಿಗುವುದು ಕೇವಲ ಕೆಲವು ಶತಮಾನಗಳಿಗೊಂದು ಬಾರಿ. ಗಾಂಧಿಯವರಂತಹ ವ್ಯಕ್ತಿಯು ನಮ್ಮ ಮಧ್ಯೆ ಇರುವುದೆಂಬ ಅಂಶವೇ ನಮ್ಮನ್ನು ಉತ್ತೇಜಿಸುವುದು."

ಶಸ್ತ್ರಾಸ್ತ್ರಾಸದ ಬಗ್ಗೆ ಪ್ರಶ್ನೆ ಕೇಳಲು ಅದು ಕೇವಲ ಪಕ್ಕ. ರಾಷ್ಟ್ರಗಳಿಂದ ಆಯುಧಗಳನ್ನು ಕಿತ್ತುಕೊಂಡರೆ ಅವು ತಮ್ಮ ಮುಷ್ಟಿಯಿಂದಲೇ ಹೊಡೆದಾಡುವುವು ಎಂದು ಮಿ. ಬರ್ನಾರ್ಡ್ ಷಾ ರವರು ಜವಾಬಿತ್ತರು.

ತರುವಾಯ ಮಿ. ಷಾರವರು ಪತ್ರಿಕೋದ್ಯೋಗಿಗಳಿಗೆ ಕೆಲವು ಬುದ್ಧಿಪೂರ್ವಕವಾದ ಮಾತುಗಳನ್ನು ಹೇಳಿದರು. ನಿಮಗೆ ನಿಮ್ಮದೇ ಸರ್ಕಾರವು ದೊರೆತರೆ, ಮೊದಲು ನಿಮ್ಮ ಕರ್ತವ್ಯವೇನೆಂದರೆ, ಒಹಿರಂಗವಾಗಿ ಭಾಷಣ ಮಾಡುವುದನ್ನು ಮರಣ ದಂಡನೆಯ ಅಪರಾಧವನ್ನಾಗಿ ಮಾಡಿರಿ. ಭಾರತೀಯರಿಗೆ ಮೂತನಾಡುವ ಶಕ್ತಿ ಅಪಾರವಾಗಿದೆ. ನನ್ನ ಪ್ರಯಾಣದಲ್ಲಿ ಕೆಲವರು ಹೀಗೆ ಹೇಳುತ್ತಿದ್ದುದನ್ನು ಕೇಳಿದ್ದೇನೆ. "ಒಬ್ಬ ಹಿಂದುವನ್ನು ಸ್ವಲ್ಪ ಮುಟ್ಟಿದರೆ ಸರಿ, ಅವನು ಹಾರ್ಬರ್ ಸ್ಪೆನ್ಸರಿನ ೧೫ ಗ್ರಂಥಗಳನ್ನು ಓದಿರಬಹುದು."

ತಾಯಿನಾಡು.

ಮಹಾತ್ಮ ಗಾಂಧಿಯವರು ಸಿ. ಎಫ್. ಆಂಡ್ರೂಸ್‌ರವರಿಗೆ ಬರೆದ ಎರಡು ಪತ್ರಗಳು.

ಪ್ರಿಯ ಚಾರ್ಲಿ,

ನಿನ್ನ ಪತ್ರ ತಲಪಿತು. ದೇವರ ಕೃಪೆಯು ಅದ್ಭುತವಾಗಿದೆ. ಆ ದಿವಸಗಳು ದೇವರ ಸನ್ನಿಧಿಯು ಬಿಸಲಿನಲ್ಲಿದ್ದಂತೆಯೇ ಇತ್ತು. ಸ್ವಂತ ಬುದ್ಧಿಯಿಂದ ಒಂದು ಕಾರ್ಯವನ್ನಾದರೂ ನೂಡಿದ್ದಲ್ಲ. ಪ್ರಾರ್ಥನೆಗೆ ತ್ವರಿತವಾಗಿಯೂ ಖಂಡಿತವಾಗಿಯೂ ಜವಾಬುದೊರೆತದ್ದು ಬೇರೆ ಎಂದೂ ಆಗಲಿಲ್ಲ.

ನೀವು ಅಲ್ಲಿದ್ದದ್ದೇ ಒಳ್ಳೆದಾಯಿತು. ನೀವು ಅಲ್ಲಿ ನಿಂತಕರೆ ನಿಮಗೆ ಎಷ್ಟು ಪ್ರಯೋಜನವಿತ್ತಿಂತ ನನಗೆ ಗೊತ್ತಿತ್ತು. ನಿಮ್ಮ ತಂತಿಗೆ ಜವಾಬು ಕೊಡಲು ಒಂದು ಕ್ಷಣವಾದರೂ ಹಿಂದು ಮುಂದು ನೋಡಲಿಲ್ಲ. ಆಗ ಮೂಡಿದ ತೀರ್ಮಾನವು ಸರಿ ಎಂಬುದರಲ್ಲಿ ವೆಲ್ಲಭಾಯಿಯವರಿಗೂ, ಮಹದೇವದೇಸಾಯಿಯವರಿಗೂ ಸಂಶಯವೇನೂ ಇರಲಿಲ್ಲ. ಆ ಭಯಂಕರ ದಿವಸಗಳಲ್ಲಿ ಮೂಡಿದ ಮಹತ್ತ್ವದ ತೀರ್ಮಾನಗಳು ಸಂಯೋಜಕ ಅವರಿಗೆ ಸ್ವಭಾವಿಕವಾಗಿಯೇ ತಿಳಿಯುತ್ತಿತ್ತು.

ಆದರೆ ಈಗ ತಾನೇ ಕೆಲಸಕ್ಕೆ ಪ್ರಾರಂಭವಾಯಿತು. ನನಗೆ ಜೀವವನ್ನು ಅಡ್ಡಹಾಕಿ ಮೂಡಬೇಕಾದ ಹೋರಾಟವಾಗಿದೆ. ಇನ್ನು ಕೈಕೊಳ್ಳುವ ಉಪವಾಸವು ಮರಣದ ವರೆಗೂ ಆಗಬೇಕು ಅಸ್ಪೃಶ್ಯತೆ ನಿವಾರಣೆಯಾಗಬೇಕು. ಇದು ಮಹತ್ಕಾರ್ಯ. ಆ ಎಂಟುಗುಗಳಿಗೆ ಸೇರುತ್ತಿದ್ದ ಕೋಟಿ ಗಟ್ಟಲೆ ಜನರ ಪ್ರೀತಿಯನ್ನು ಪರೀಕ್ಷಿಸಬೇಕಾಗಿದೆ. ದೇವರೊಂದಿಗೆ ಕುಸ್ತಿ ಮೂಡಬೇಕಾಗಿದೆ. ದೇವರು ಕರುಣಾಳು. ಆದರೆ ನಮ್ಮಿಂದ ಆಗುವಷ್ಟು ಕೆಲಸವನ್ನು ಮೂಡಿಸಿಕೊಳ್ಳುತ್ತಾನೆ. ಸಂಪೂರ್ಣ ಆತ್ಮತ್ಯಾಗವಾಗಬೇಕು ಅಥವಾ ಏನೂ ಬೇಡವೆನ್ನುತ್ತಾನೆ. ಈಗ ಕಳೆದ ಉಪವಾಸವು ಮುಂದೆ ಆಗಲಿಕ್ಕಿರುವುದಕ್ಕೆ ಪೀಠಿಕೆಯಿಂತ ತೋರುತ್ತದೆ. ಆದರೆ ಆ ವಿಷಯ ಈಗ ಆಲೋಚಿಸುವುದು ಬೇಡ. ನನ್ನ ಇಚ್ಛೆಯಿಂತ ಅಲ್ಲ, ಅವನ ಇಚ್ಛೆಯಿಂತೆ ಆಗುತ್ತದೆ. ತ್ಯಾಗಕ್ಕೆ ಅರ್ಹನಾಗಲು ಪ್ರಯತ್ನಿಸಲು ಶಕ್ತನಷ್ಟೆ.

ನೀವು ಇನ್ನೂ ಅಲ್ಲೇ ಇರಬೇಕು. ನೀವು ಹೇಳುವ ಅಸ್ಪೃಶ್ಯತೆಯು ಸೂಕ್ಷ್ಮವಾದದ್ದು ಅದಕ್ಕೆ ಗಾಂಭವದ ಹೊಡಿಕೆಯೂ ಇದು. ಹಿಂದೂಸ್ಥಾನದ ನಮ್ಮ ಅಸ್ಪೃಶ್ಯತೆಯ ಬಹಿರಂಗವಾದದ್ದು ಆದ್ದರಿಂದ ಅದನ್ನು ನಿವಾರಿಸುವ ಕೆಲಸವು ಬಹುಶಃ ಸುಲಭವಾದದ್ದು.

ಕಳಕೊಂಡ ಶಕ್ತಿಯು ಪುನಹ ಬಂದಿದೆ. ನಿಮಗೆ ಮತ್ತು ನಿಮ್ಮ ಬೆಳೆಯುತ್ತಿರುವ ಕುಟುಂಬಕ್ಕೆ ನನ್ನ ಪ್ರೀತಿಯು.

ನಿಮ್ಮವನಾದ,
೨೦—೧೦—೧೯೩೨ ಮೋಹನ.

ಪ್ರಿಯ ಚಾರ್ಲಿ,

ನಿಮ್ಮ ಎರಡು ಪತ್ರಗಳಿಗೆ ಜವಾಬುಕೊಡಬೇಕಾಗಿದೆ. ನಿಮ್ಮ ತೀರ್ಮಾನವು ಸರಿಯೊದ್ದಲ್ಲ. ನಿಮ್ಮ ಅಸ್ಪೃಶ್ಯತಾ ಸಮಸ್ಯೆಯು ನನ್ನದಕ್ಕಿಂತ ಕಠಿಣವಾದದ್ದು. ಅಸ್ಪೃಶ್ಯತಾ ಭಾವನೆಯು ನಾಶವಾಗುತ್ತಲಿದೆ ಅದನ್ನು ನಾಶಪಡಿಸುವಂಥಾ ಸುಧಾಕರ ಸೈನ್ಯವು ಹೆಚ್ಚುತ್ತಲಿದೆ. ನಿಮ್ಮದರಲ್ಲಿ ಸಾಯುವ ಊಹನೆಗಳು ತೋರಬರುವುದಿಲ್ಲ. ಅಲ್ಲಗೆ ನಿಜವಾದ ಶಾಸ್ತ್ರದ ಹೆಸರಿನಿಂದ ಒತ್ತಾಸೆ ಕೊಡುವವರಿದ್ದಾರೆ. ಸುಧಾರಕರು ಕಡಿಮೆ. ನಿನಗೂ ನನಗೂ ಅನುಭವಕ್ಕೆ ಬಂದಂತೆ ಮನುಷ್ಯನಿಗೆ ಕಷ್ಟವಾದದ್ದು ದೇವರಿಗೆ ಸುಲಭ. ಹೇಗೂ ನಮ್ಮ ಭಾಗದ ಕೆಲಸವನ್ನು ಮೂಡಬೇಕಾಗಿದೆ. ನಿನ್ನ ಕೆಲಸಕ್ಕೆ ಜಯವಾಗಲೆಂತ ಪ್ರಾರ್ಥಿಸುತ್ತೇನೆ.

ಗುರುದೇವರು ರವೀಂದ್ರನಾಥ ಠಾಗೋರರು ಅದೇ ಕೆಲಸದಲ್ಲಿದ್ದಾರೆ. ಆ ಚಿಕ್ಕ ಉಪವಾಸದಿಂದ ನಾನು ಕನಸಿನಲ್ಲಿಯೂ ಕಾಣದ ನಿಧಿಗಳನ್ನು ಪಡೆದೆ. ಗುರುದೇವರೇ ಅತ್ಯಮೂಲ್ಯವಾದ ನಿಧಿ. ಗುರು ದೇವರನ್ನು ಪಡೆಯಲು ಉಪವಾಸ ಮೂಡು ಎಂದು ಯಾರಾದರೂ ಹೇಳಿದ್ದರೆ ಹಿಂದು ಮುಂದು ನೋಡದೆ ಉಪವಾಸವನ್ನು ಕೈಕೊಳ್ಳುತ್ತಿದ್ದೆ. ಅವರ ಹೃದಯದಲ್ಲಿ ಸ್ಥಾನವನ್ನು ಪಡೆಯಲು ಆತುರಪಡುತ್ತಿದ್ದೆ. ದೇವರ ದಯೆಯಿಂದ ಈ ಉಪವಾಸದಿಂದ ಆ ಸ್ಥಾನವು ದೊರೆಯಿತು.

ನಿಮ್ಮ ಪ್ರಿಯ,
ಮೋಹನ.

ಬಡತನದೆ ಭಾಗ್ಯ.

(ಕೆ. ಯಂ. ಪೂವಯ್ಯನವರಿಂದ)

ಲೋಕದಲ್ಲಿ ಜನರು ಸಾಮಾನ್ಯವಾಗಿ ಬಡತನವನ್ನು ಅಂಜುವಷ್ಟು ಬೇರೆ ಯಾವುದನ್ನೂ ಅಂಜದೆ, ಬೇರೆ ಎಲ್ಲಾ ಶತ್ರುಗಳಿಗಿಂತಲೂ ಮನುಷ್ಯ ಸುಖಕ್ಕೆ ಬಡತನವೇ ಬಹು ಬಲಾಢ್ಯವಾದ ಶತ್ರುವೆಂದೆನಿಸಿ, ಮನುಷ್ಯನು ನಿರಂತರವೂ ಎಡೆಬಿಡದೆ ಆ ಶತ್ರುವನ್ನು ದೂರ ಮಾಡುವ ಪ್ರಯತ್ನದಲ್ಲಿಯೇ ಹೋರಾಡುತ್ತಲಿರುವನು. ಆ ಶತ್ರುವನ್ನು ಸದ್ಯಕ್ಕೆ ಎದುರುಗೊಳ್ಳದೆಯೂ ಕೂಡ, ಅನೇಕ ಬಲಹೀನರು, ಬಹು ದೂರದಲ್ಲಿಯೇ ಇರುವ ಆ ಶತ್ರುವಿನ ಯೋಜನೆಯಲ್ಲಿಯೇ ತಮ್ಮ ಶಮಸಿದ್ಧಾರ್ಥವನ್ನೂ ಮೊಳೆಗೊಕ್ಕಿ, ಆ ಸೆಣಸಿ ಬಲಾಢ್ಯನೆಂದೆನಿಸುವ ಆ ಶತ್ರುವಿನ ಮಹಿಮೆಗೆ ಅಂಜಿ ತಮ್ಮ ಜೀವವನ್ನೂ ಕೂಡ ಕಳೆದುಕೊಂಡಿರುವರು. ಆದರೂ ಅಂಥಾ ಬಡತನವನ್ನು ಸ್ತುತಿಸುವುದೆಂದರೆ ನೋಜಿಗವೇ !

ಸೃಷ್ಟಿಕರ್ತನ ದೃಷ್ಟಿಯಲ್ಲಿ ಬಡವ ಬಲ್ಲಿದನೆಂಬ ಭೇದವಿಲ್ಲದೆ, ಎಲ್ಲರೂ ಬಡವರಾಗಿಯೇ ಆತನ ದೃಷ್ಟಿಯಲ್ಲಿರುವರು. ಆದರೇನು ? ಭೂಲೋಕದ ನವನಾಗರೀಕತೆ ಎಂಬುದರ ಬೆಳವಣಿಗೆಯ ಹೋರಾಟದಲ್ಲಿ ಬಡವ ಬಲ್ಲಿದರೆಂಬ ಭೇದವೂ ಬಂತು. ಈ ಹೋರಾಟದಲ್ಲಿ ದೇವರು ಮನುಷ್ಯ ಸುಖಕ್ಕೆ ಅವಶ್ಯವೆಂದು ಕಂಡು ಕೊಟ್ಟ 'ಶೃಷ್ಟಿ' ಎಂಬ ಹಣ್ಣನ್ನು ಜಯಿಸಲು ಪ್ರಯತ್ನಿಸಿ ಬಲ್ಲಿದರೆಂಬವರು, ಸುಲಭದಲ್ಲಿಯೇ ಕೆಂಪಾಗಿ, ಕಣ್ಣಿಗೆ ಅಲಂಕಾರವಾಗಿ ಕಾಣಿಸಿದ ಆ ಹಣ್ಣಿನ ಸಿಪ್ಪೆಯನ್ನು (rind) ಎಳೆದುಕೊಂಡು ಹೋಗಿ, ಅವರ ಬುದ್ಧಿ ಚಾತುರ್ಯದಿಂದ ಅದಕ್ಕೆ ಇನ್ನೂ ವಿಧ ವಿಧ ಬಣ್ಣವನ್ನು ಪಚ್ಚಿ ಮತ್ತಷ್ಟೂ ರಮ್ಯವಾಗಿ ಅದನ್ನು ತೋರ್ಪಡಿಸಿಕೊಂಡು, ಒಹು ಅಹಂಕಾರದ ಸೊಕ್ಕಿನಿಂದ ಸೃಷ್ಟಿಕರ್ತನ 'ಶೃಷ್ಟಿ' ಎಂಬ ಹಣ್ಣು ನನ್ನು ಕೈಯ್ಯಲ್ಲಿದೆ ಎಂಬದಾಗಿ ಕಣ್ಣಾಡಿಸುತ್ತ, ಸರ್ವರನ್ನೂ ಮರಳು ಮಾಡುತಲಿರುವರು. ಅವನ್ನು ನೋಡಿದವರೆಲ್ಲರೂ ಅದರ ರಮ್ಯದಿಂದ ಆಕರ್ಷಿಸಲ್ಪಟ್ಟು ಅವರ ಕಡೆಗೆ ಸಂಚರಿಸುತ್ತಲಿರುವರು.

ಹೀಗೆ ಬಲ್ಲಿದರೆಂಬವರು ಬರೀ ಸಿಪ್ಪೆಯ ರಮ್ಯದ ಆವಣ್ಯಕ್ಕೆ ಮರುಳಾಗಿ, ಸೂರ್ಯನ ಕಿರಣಗಳನ್ನು ನೋಡಿದ ಕಣ್ಣುಗಳಂತೆ ಅತ್ತಿತ್ತ ನೋಡಲು ಕೂಡ ಸಾಗದೆ ನಿಂತಿರುವರು. ಅವರ ಒಂದೇ ಯೋಜನೆಯು ಆ ಸಿಪ್ಪೆಗೆ ಮತ್ತಷ್ಟು ಬಣ್ಣ ಹಚ್ಚುವುದರಲ್ಲಿಯೇ ಇದೆ. ಅವರು ಹೀಗೆ ಎಂದೂ ತೃಪ್ತಿ ಪಡಿಸಲು ಅಸಾಧ್ಯವಾದ 'ಆಶೆ' ಎಂಬುವುದರ ಬಲೆಗೆ ತುತ್ತಾಗಿ ಅವರ ಕಬ್ಬಿಣದ ಸಲಾಕೆಗಳ ಕಟ್ಟಿನಿಂದ ಕೊಂಚ ಮಟ್ಟಿಗೂ ಬಿಡಿಸಿಕೊಳ್ಳಲಾರದೆ ಹೋಗಿರುವರು. 'The sea hath bounds, but deep desire hath none.'

ಬಡವನಾದರೇನು ? ತಾನು ನಿಂತಲ್ಲಿಂದ ಕದಲಲಿಲ್ಲ. ತನ್ನನ್ನು ನಿಟ್ಟು 'ಮುಂದೆ' ಹೋದವರ ಕೂಡೆಜಗಳವಾಡಲಿಲ್ಲ. ಆದರೆ ಸೃಷ್ಟಿಕರ್ತನು ಮನುಷ್ಯ ಜನ್ಮಕ್ಕೆ ಕೊಟ್ಟಂತ ತೃಪ್ತಿಯ ಹಣ್ಣನ್ನು ತನ್ನ ಕೈಯಿಂದ ಬಿಡಲಿಲ್ಲ. ಬಲಾಢ್ಯರು ಬಲ್ಲಿದರೆಂಬವರು ಆ ಹಣ್ಣಿನ ಸಿಪ್ಪೆಯನ್ನು ನಿಜವಾದ ಹಣ್ಣೆಂದು ಯೋಚಿಸಿಕೊಂಡು, ಓಡಿ ಹೋಗುವಾಗ, ಬಡವನು ಆ ನಿಜವಾದ ಹಣ್ಣನ್ನು ಭದ್ರವಾಗಿ ತನ್ನ ಕೈಯಲ್ಲಿಯೇ ಹಿಡಿದುಕೊಂಡು, ತಮ್ಮಿಂದ ಓಡಿಹೋದವರು ಯಾವ ಕಾಲದಲ್ಲಿಯಾದರೂ ಕೂಡ ತನ್ನಲ್ಲಿಗೆ ಹಿಂತಿರುಗಿ ಬಂದು ಹುಡುಕಿದರೂ ಕೂಡ ಕಾಣದಂತೆ ತನ್ನ ಸರ್ವ ಶಕ್ತಿಯಿಂದ ಕೂಡಿದ ಆತ್ಮದೊಳಗೆ ಬಚ್ಚಿಟ್ಟು ಸುಮ್ಮನೇ ಕುಳಿತಿರುವನು. ತೃಪ್ತಿ, ಅಸಂಪೂರ್ಣ ತೃಪ್ತಿಯೆಂಬ ಸರ್ವಶ್ರೇಷ್ಠವಾದ ಸರ್ವಶಕ್ತಿಯಿಂದ ಕೂಡಿದ ಸರ್ವವನ್ನೂ ತನ್ನಲ್ಲಿಗೆ ಆಕರ್ಷಿಸುವ ಶಕ್ತಿಯುಳ್ಳ, ಸರ್ವ ಮನಸಿಗೂ ಸಂತೋಷ ಕೊಡುವ ಅಮೃತವಂತೆ ರುಚಿಸುವ ಆ ಎನರಿಸಲಶಾಧ್ಯವಾದ ಭಗವಂತನ ಬಹುನೂನವು ಬಡವನ ಕೈಯಲ್ಲಿಯಲ್ಲದೆ ಬೇರೆ ಯಾರಲ್ಲಿದೆ. ಆ ತೃಪ್ತಿಯನ್ನು ಅನುಭವಿಸುವುದಕ್ಕಿಂತಲೂ ದೊಡ್ಡದಾದ ಭಾಗ್ಯವು ಇನ್ನೂ ಯಾವುದಿದೆ ?

ಬಲ್ಲಿದರೆಂಬವರು, ತಮ್ಮ ಐಶ್ವರ್ಯದ ಮತ್ತು ನಾಗರೀಕತೆ ಎಂಬುವುದರ ಮೋಹವಲ್ಲಿ ಮರುಳಾಗಿ, ತನ್ನ ಸರ್ವಸ್ವವನ್ನೂ ಮರೆತು, ತಾನು ಎಲ್ಲಿ ನಿಂತಿರುವೆನೆಂಬುವುದನ್ನೂ ಕೂಡ ಮರೆತಿರುವರು. ಅವರು ತಮ್ಮ ಪ್ರತಿ ದಿವಸದ ಅವಶ್ಯಕತೆಗಳು ಹೆಚ್ಚಾಗಿ, ಅವುಗಳೆಲ್ಲವಕ್ಕೂ ಪರರ ಮೇಲೆ ನಂಬಿಕೊಳ್ಳಬೇಕಾದವರಾಗಿದ್ದಾರೆ. ಅವರು ಕೆಲವು ವರ್ಷಗಳ ಮುಂದೆ ಬರುವ ಅವಶ್ಯಕತೆಗಳ ಯೋಜನೆಯಲ್ಲಿಯೇ ಕರಗಿ ಅತ್ಯವಿಲ್ಲದ ವ್ಯಥೆಯಲ್ಲಿರುವರು. ಹೀಗಾಗಿ ಸೃಷ್ಟಿಕರ್ತನನ್ನೇ ಮರೆತು, ಆತನಲ್ಲಿ ವಿಶ್ವಾಸವು ಇಲ್ಲದೆ ದಿನ ದಿನವೂ ಆತನನ್ನು ಬಿಟ್ಟು ದೂರ ದೂರಕ್ಕೆ ತೆರಳುತ್ತಲಿದ್ದಾರೆ. ಬಡವನಾದರೋ ನಾಳೆಯ ಯೋಜನೆಯು ಆತನಲ್ಲಿರುವುದಿಲ್ಲ. 'ಹುಟ್ಟಿಸಿದ ದೇವರು ಊಟಕ್ಕೆ ಕೊಡಲಾರನೇ' ಎಂಬಂತೆ ಆತನಲ್ಲಿ ಸಂಪೂರ್ಣ ವಿಶ್ವಾಸವನ್ನಿತ್ತು ತನ್ನ ಇನ್ನೊಂದು ಹೊತ್ತಿನ ಅನ್ನವನ್ನು ಸಹ ಕೂಡಿಡಲು ಪ್ರಯತ್ನಿಸದೆ ಇರುವನು. ತನ್ನನ್ನೇ ಮರೆತು ಹೋಗುವಷ್ಟರಮಟ್ಟು ಪರಮಾತ್ಮನನ್ನು ಮೆಚ್ಚಿ ಪರಮಾತ್ಮನನ್ನು ತನ್ನ ಆತ್ಮದಲ್ಲಿಯೇ ಹೆಣಕೊಂಡು, ಪ್ರತಿನಿತ್ಯವೂ ಆತನನ್ನು ತನ್ನ ಆತ್ಮದಲ್ಲಿಯೇ ಕಾಣುವನು. ಐಶ್ವರ್ಯದ ಡೆಮ್ಮೆ, ಅಹಂಕಾರ, ಅತ್ಯಾಶೆ ಇವುಗಳೆಲ್ಲವೂ ಬಡವನಲ್ಲಿಲ್ಲವು.

ಅಯ್ಯೋ ಬಡತನವೇ ! ನಿನ್ನನ್ನೇಕೆ ಮಾನವನು ಅಂಜುವನು ? ಅಯ್ಯೋ ಬಡತನೇ, ನಿನಗೆ ಯಾತಕ್ಕೆ ಚಿಂತೆ ? ನಿನ್ನ ಜೀವವೇ ಸುಖ ಗರ್ಭಿತವಾಗಿರುವುದು. ಮಧ್ಯಾಹ್ನದ ಸೂರ್ಯನ ಕಿರಣಗಳು ಭೂ ಮಂಡಲದ ವೇಲೆ ಬೀಳುವಂತೆ ಪರಮಾತ್ಮನ ಸರ್ವದೃಷ್ಟಿಯೂ ಸರ್ವದಾ ನಿನ್ನ ವೇಲೆಯೇ ಬೀಳುತ್ತಲಿದೆ ಪರಮಾತ್ಮನು ಮಾನವನಲ್ಲಿ ಇರಲು ಇಚ್ಛಿಸುವಂಥಾ ಸರ್ವ ಸುಗುಣಗಳೂ ನಿನ್ನಲ್ಲಿಯೇ ಇರುವುದಾಗಿ ಸಂಪಿಗೆ ಹೂವಿನ ಸುವಾಸನೆಯು ಕ್ರಿಮಿ ಕೀಟಾದಿಗಳನ್ನು ಆಕರ್ಷಿಸುವಂತೆ ಸಂಪತ್ತಿ, ಲಕ್ಷ್ಮಿ, ಪಾರ್ವತಿ ದೇವಿಯಂಥಾ ಕೂಡ ನೀನು ನಿನ್ನ ಸನ್ನಿಧಿಗೆ ಆಕರ್ಷಿಸಿ ನಿನ್ನ ಪಾದಪೂಜನೆ ಮಾಡುವಂತೆ ಮಾಡಿರುವೆ. ಅಂಥಾ ಬಡತನವನ್ನು ಅಯ್ಯೋ ಮಾನವನೇ ನೀನು ತ್ಯಜಿಸುವಿಯೋ !

ಪರ್ಷಿಯೊದೇಶದ ಎಣ್ಣೆ ಜಗಳಕ್ಕೆ ಕಾರಣವೇನು?

ಪರ್ಷಿಯಾ ದೇಶದಲ್ಲಿ ಈಚೆಗೆ ನಡೆದ ಮಹಾ ಕೋಲಾಹಲಗಳನ್ನು ನೀವು ಕೇಳಿರುವಿರಿ.

ಅಖಂಡ ರಾಜ್ಯದಲ್ಲೆಲ್ಲಾ ಕೋಲಾಹಲ. ಪ್ರಜೆಗಳಿಗೆ ಮಹದಾನಂದ! ಊರು ಊರಿನಲ್ಲೂ ದೀಪೋತ್ಸವಗಳು! ಬಾಣಬಿರುಸುಗಳು! ಬಿಟ್ಟಿ ಬಯಾಸ್ಕೋಪುಗಳು! ಪುಕ್ಕಟೆ ನಾಟಕಗಳು! ಹಬ್ಬದ ವೈರಿತ! ಕುಶಾಲು ಕುಣಿತ! ಮೋಜು ಮಜಾಕು!!

ಒಂದು ವಾರ ಪರ್ಯಂತ ಈ ರೀತಿ.

ಇದು ಯಾಕಿರಬಹುದು? ರಾಜನಿಗೆ ಪಟ್ಟಾಭಿಷೇಕವೆ? ವಿವಾಹವೇ? ಪುತ್ರೋತ್ಪತ್ತಿಯೆ? ಯಾಕಿಷ್ಟು ಮಹಾ ಕೋಲಾಹಲ?

ಇದಿಷ್ಟೂ ಒಂದು ಕರಾರನ್ನು ಮುರಿದದ್ದಕ್ಕೆ ರಾಜ್ಯದ ರಾಜನು ಸಹಿಮಾಡಿದ ಕರಾರನ್ನು ಭಂಗಪಡಿಸಿದ್ದಕ್ಕೆ.

ರಾಜನು ಮಾಡಿದ್ದ ಒಪ್ಪಂದವನ್ನು ತಿರಸ್ಕಾರಮಾಡಿ ಪಾಲಿಸದೇಕು ಅದು ನ್ಯಾಯ. ಅವನ್ನು ಬಿಟ್ಟು, ಅಪವರ್ಗದಲ್ಲಿ ನಡೆದದ್ದಕ್ಕೇಕೆ ಈ ಕೋಲಾಹಲ?

ಆ ಕರಾರು ಅಂತಹುದು. ರಾಜ್ಯದ ಏಳಿಗೆಗೆ ಅದರಿಂದ ಕುಂದಕ್ಕ.

ಆ ಕರಾರು ಕಡಿದು ಬಿದ್ದರೆ ತಮಗೆ ಶ್ರೇಯಸ್ಕರವೆಂದು ನಂಬಿದರು ಪ್ರಜೆಗಳು.

ಹೋಗಲಿ—ಆ ಒಪ್ಪಂದದ ಎದುರು ಪಕ್ಷದವರಾದರೂ ಯಾರು? ರಾಜನು ಸಹಿಮಾಡುವುದೆಂದರೆ, ಬೇರೆಯಲ್ಲಿನ ಆ ಪಾರ್ಷ್ಯರೊಂದಿಗೆ ಸೇರಿಯೂನೆ?

ಆ ಪಕ್ಷದವರು ಮತ್ತಾರೂ ಅಲ್ಲ. ಇಂದಿನ ಜಗತ್ತಿನಲ್ಲಿ ಮಹಾಸಾಹಸ ಸಾಧಕರ್ಯಗಳನ್ನುಳ್ಳ ಆಂಗ್ಲೇಯರು.

ಅವರೊಡನೆ ಮಾಡಿಕೊಂಡಿದ್ದ ಷರತ್ತುಗಳನ್ನು ಕಾಲಿಗೆ ಸಿಕ್ಕಿದ ಮುಳ್ಳನ್ನು ಕಿತ್ತೆಸೆಯುವಂತೆ ಗಾಳಿಗೆಸೆಯುವುದೆಂದರೆ, ಕೇಸರಿಯ ಕೋರೆ ಹಲ್ಲುಗಳನ್ನು ಕೀಳುವುದಕ್ಕೆ ಹೋದಂತೆಯೆ ಸರಿ. ಆಂಗ್ಲೇಯರೊಡನೆ ಸೆಣಸುವುದು ಸಾಮಾನ್ಯವಲ್ಲ.

ಕರಾರಾದರೂ ಹೊಸದೆ? ಅದೂ ಅಲ್ಲ. ಕಳೆದ ಮೂವತ್ತು ವರ್ಷಗಳಿಂದಲೂ ಜಾರಿಯಲ್ಲಿದೆ. ಅಂದಿನಿಂದಲೂ ಶರತ್ತುಗಳನ್ನು ಪಾಲಿಸುತ್ತ ಬಂದಿದ್ದಾರೆ ಕರಾರಿನ ಮೇಲೆ ಅವರಿಗೊಂದು ಹಕ್ಕು ಒಂದಿದೆ.

ಹೀಗಿದ್ದಾಗ್ಯೂ, ತಾಸನಗಳನ್ನು ವಿರಿ, ಅಂತರಾಷ್ಟ್ರೀಯ ಮರ್ಯಾದೆಗಳ ಮೇರೆ ದಾಟಿ, ಅತಿ ಸಾಹಸದ ಕೆಲಸವನ್ನು ಮಾಡಿದ್ದಾರೆ.

ಈ ಸುದ್ದಿಯು ಪ್ರಜೆಗಳಿಗೆ ತಿಳಿಯಿತು. ರಾಜ್ಯದಲ್ಲಿ ಕೋಲಾಹಲಕ್ಕಾರಂಭವಾಯಿತು.

ಆ ಕರಾರಿನ ಷರತ್ತುಗಳು ತಮಗೆ ಅಷ್ಟು ನಷ್ಟಕರವಾಗಿದ್ದವಂತೆ.

....

ಈ ಕರಾರು ಪರ್ಷಿಯಾದಲ್ಲಿರುವ ಎಣ್ಣೆಯ ಭಾವಿಗಳಿಗೆ ಸಂಬಂಧಪಟ್ಟದ್ದು. ಆ ಭಾವಿಗಳಿಂದ ಎಣ್ಣೆ ತೆಗೆದು ಸಾಗಿಸಿ ಮಾರಾಟ ಮಾಡಿಕೊಳ್ಳಲು ಹಿಂದಿನ ಪರ್ಷಿಯಾದ ಅರಸು ಆಂಗ್ಲೇಯರಿಗೆ ಅರವತ್ತು ವರ್ಷಗಳ ರಹದಾರಿಯನ್ನು ಕೊಟ್ಟನು.

ಅಂದಿನಿಂದ ಆಂಗ್ಲೊ—ಪರ್ಷಿಯನ್ ಆಯಿಲ್ ಕಂಪೆನಿಯು ಕೆಲಸಮಾಡುತ್ತಿದೆ.

ಅದಕ್ಕೀಗ ಅಡ್ಡಿ.

ಆ ಅಡ್ಡಿಯಾಯಿತೆಂದು ಇಷ್ಟು ಆನಂದ.

....

ಪ್ರಜೆಗಳಿಗೆ, ಕರಾರನ್ನು ರದ್ದುಪಡಿಸಲು ಇಷ್ಟು ಆನಂದವಾಗಬೇಕಾಗಿದ್ದರೆ, ಇದ್ದ ಮಹತ್ವರವಾದ ಕಾರಣಗಳು ಯಾವುವು? ತಮ್ಮ ಹಿಂದಿನ ಅರಸನು ಕೊಟ್ಟಿದ್ದ ರಹದಾರಿಯಿಂದ ರಾಜ್ಯದ ಪ್ರಗತಿ ಮಾರ್ಗದಲ್ಲಿ ಅವಗಡಗಳಿದ್ದಿವೆ? ಆ ಅರಸನು ಅವಿಚಾರತೆಯಿಂದ ಹಾಗೆ ಮಾಡಿದ್ದನೆ? ಆ ಕರಾರನ್ನು ಈಗ ಈ ರೀತಿ ಮುರಿದದ್ದು ಸಹಜವೆ? ಎಂಬುದು ರಾಜನೀತಿಜ್ಞರು ಪರ್ಯಾಲೋಚಿಸಬೇಕಾದ ವಿಷಯಗಳು.

....

ಈ ಶತಮಾನದ ಆದಿಭಾಗದಲ್ಲಿ ಷಹನಸಿರುದ್ದೀನ್ ಎಂಬಾತನು ಪರ್ಷಿಯಾದೇಶವನ್ನು ನಿರಂಕುಶನಾಗಿ ಆಳುತ್ತಿದ್ದನು.

ಈತನ ಆಳ್ವಿಕೆಯ ವೈಖರಿಯನ್ನು ಎಷ್ಟು ಸ್ವಲ್ಪ ಹೇಳಿದರೆ ಅಷ್ಟು ವಾಸಿ.

ಒಂದು ಬಾರಿ ಈತನು ಪ್ಯಾರಿಸ್ಸಿಗೆ ಹೋಗಿದ್ದನು.

ಅಲ್ಲೊಂದು ಅಮೋದಶಾಲೆ. ಅದರ ಹೆಸರು ಫಾಲೀಸ್ ಬೆರ್‌ಜೆರೆ ಎಂದು. ಅಲ್ಲಿ ನರ್ತನ ಮಾಡುವ ಯುವತಿಯರೆಲ್ಲರೂ ನಗ್ನರು.

ಅವರನ್ನು ನೋಡಿದ ಈತನಿಗೆ ಬುದ್ಧಿ ವಿಕಲ್ಪವಾಯಿತು. ಅವರೆಲ್ಲರನ್ನೂ ತನ್ನ ರಾಜಧಾನಿಯೂದ ಟೆಹೆರಾನಿಗೆ ಕರೆದುಕೊಂಡು ಹೋಗಿ ತನ್ನ ಜನಾನಾಕ್ಕೆ ಸೇರಿಸಿಕೊಳ್ಳಬೇಕೆಂಬ ಅಭಿಲಾಷೆ ಹುಟ್ಟಿತು.

ಇದೊಂದು 'ಸ್ಯಾಂಪಲ್' ಆತನ ಜೀವಿತದಲ್ಲಿ.

ಪ್ಯಾರಿಸ್ಸಿಗೆ ದಕ್ಷಿಣ ಭಾಗದಲ್ಲಿ 'ಪೈಂಜ್ ರವಿಯೆರಾ' ಎಂಬ ಪಟ್ಟಣವಿದೆ. ಛಳಿಗಾಲದಲ್ಲಿ ಅಲ್ಲಿಗೆ ಪ್ರಪಂಚದ ಎಲ್ಲಾ ಭಾಗಗಳಿಂದಲೂ ಹಣವಂತರು ಹೋಗುತ್ತಾರೆ. ಅಲ್ಲಿ ನಡೆಯುವಷ್ಟು ಜೂಜೂ, ಆನೋದ ಪ್ರಮೋದಗಳೂ ಮತ್ತೆಲ್ಲಿಯೂ ಇಲ್ಲ.

ಈ ಷಹ ನಸೀರುದ್ದೀನನು ಅಲ್ಲಿಗೆ ಪದೇ ಪದೇ ಹೋಗುತ್ತಿದ್ದನು.

ಇದರಿಂದ ಅವನ ಭಂಡಾರವು ಬರಿದಾಯಿತು. ಆ ಹೊಡತಕ್ಕೆ ತಡಿದೀತೆ ಅದು.

ಇನ್ನೊಂದು ಬಾರಿ, ಜಗದ್ವಿಖ್ಯಾತವಾಗಿರುವ 'ತಕ್ತ್-ಇ-ಟಾವುಸ್' ಎಂಬ ಮಯೂರಾಸನವನ್ನು ರಿಪೇರಿ ಮಾಡಿಸುತ್ತೇನೆಂದು ನಪಹೇಳಿ, ಅದರಲ್ಲಿದ್ದ ಅಲಭ್ಯ ಅಮೂಲ್ಯಗಳಾದ ನವರತ್ನಗಳನ್ನು ಕೀಳಿಸಿ, ಅದಕ್ಕೆ ಬದಲಾಗಿ ಪ್ಯಾರಿಸ್ಸಿನ ಗಾಜಿನ ಚೂರುಗಳನ್ನು ಉಪಯೋಗಿಸಿದನು.

ತಲೆತಲಾಂತರಗಳಿಂದ ಬಂದಿರುವ, ಚಕ್ರವರ್ತಿಗಳು ಮಂಡಿಸುವ, ಈ ಮಯೂರಾಸನಕ್ಕೆ ಇಂತಹ ದ್ರೋಹವೂಡಲು ಹಿಂಜರಿಯದಾತನು ಮತ್ತಾವುದನ್ನು ಮಾಡಲು ಹೇಸೀತು?

ಈತನಿಗೆ ಜವಾಬ್ದಾರಿಯೆನ್ನುವುದು ಎಳ್ಳಷ್ಟಾದರೂ ಇರಲಿಲ್ಲ. ಮನಸ್ಸಿಗೆ ತೋರಿದ್ದನ್ನು ಮಾಡಿಬಿಡುತ್ತಿದ್ದನು. ಅವನತಿಯು ಹಾದಿಯು ಆತನದು. ಇತ್ತ ರಷಿಯಾದ ಸಾರರೊಂದಿಗೂ ಸರಿ: ಅತ್ತ ಆಂಗ್ಲೇಯರಿಗೂ ಅಚ್ಚುಮೆಚ್ಚು. ಈ ರೀತಿ ಅವರ ಮೇಲೆ ಇವರನ್ನೂ, ಇವರ ಮೇಲೆ ಅವರನ್ನೂ ಹಾಕಿ ತನ್ನ ಕೆಲಸವನ್ನು ಮಾಡಿಕೊಳ್ಳುತ್ತಿದ್ದನು.

ತನ್ನ ದುರ್ವ್ಯಾಪಾರಗಳಿಂದಲೂ, ಅತಿ ವೆಚ್ಚಗಳಿಂದಲೂ ಭಂಡಾರ ಬರಿದಾಗುತ್ತ ಬಂದಂತೆಲ್ಲ, ತಕ್ಕಡಿಯನ್ನು ಸರಿದೂಗಿಸಲು ಆಂಗ್ಲೇಯ ಮತ್ತು ರಷಿಯಾ ಎರಡು ರಾಜ್ಯಗಳಿಂದಲೂ ಸಾಲಮಾಡುತ್ತ ಬಂದನು.

ಹೀಗಿರುವಾಗ ೧೯೦೧ ರಲ್ಲಿ ಭಂಡಾರವು ಖಾಲಿಯೂಗಿ ಹೋಗಿ ಮಹಾ ಇಕ್ಕಟ್ಟಿಗಿಟ್ಟುಕೊಂಡಿತು.

ಆಗ ವಿಲಿಯಂ ನಾಕ್ಸ್ ಡಿಯಾರ್ಸಿ ಎಂಬ ಆಂಗ್ಲೇಯನಿಗೆ ಒಂದು ರಹದಾರಿಯನ್ನು ಕೊಟ್ಟನು ಈ ರಹದಾರಿಯ ರೀತ್ಯಾ ಆತನು ಪರ್ಷಿಯಾ ದೇಶದಲ್ಲಿ—ಕ್ಯಾಸ್ಪಿಯನ್ ಸಮುದ್ರದ ಪಕ್ಕದಲ್ಲಿದ್ದ ಐದು ಪ್ರಾಂತ್ಯಗಳ ವಿನಹ—ಎಲ್ಲಿ ಬೇಕಾದರೂ ಭಾವಿಗಳನ್ನು ಅಗೆದು, ಪೆಟ್ರೋಲಿಯಂ, ಸೀಮೆಯೆಣ್ಣೆ, ಆಸ್ಫಾಲ್ಟ್ ಮತ್ತೂ ಕೋಳೆರೈಟ್ ಮುಂತಾದವುಗಳನ್ನು ತೆಗೆದು, ಶುದ್ಧಿ ಮಾಡಿ, ಸಾಗಿಸಿ, ಮೂರಾಟ ಮಾಡಬಹುದಾಗಿತ್ತು.

ಈ ರೀತಿಯಾದ ಹಕ್ಕುಗಳನ್ನು ಅರವತ್ತು ವರ್ಷಗಳು ಅನುಭವಿಸಿಕೊಂಡು ಹೋಗಬಹುದೆಂದು ರಾಜಮುದ್ರೆಯೊತ್ತಿ, ಸಹಿಮಾಡಿ ಕರಾರು ಬರೆದು ಕೊಟ್ಟನು.

ಜಗತ್ತಿನ ಅರಸುಗಳಲ್ಲಿ ಮಹಾ ಉದಾರಿಗಳ ಪಟ್ಟಿಯಲ್ಲಿ ಈ ಷಹ ನಸಿರುದ್ದೀನ ಹೆಸರಿಗೇನೇ ಪ್ರಥಮಪಂಕ್ತಿ.

ಮೇಲೆ ಹೇಳಿದ ಈ ಮಹೌದಾರ್ಯದ ವ್ಯವಹಾರದಿಂದ ಷಾಹಾನಿಗೂ ಅವನ ಪರಕಾರಕ್ಕೂ ಸಿಕ್ಕಿದ್ದಾದರೂ ಏನು? ಲೊಟ್ಟೆಪಿಟ್ಟೆ ತೇಕಡಾ ಹನ್ನೆರಾರು.

ಅದೂವೆ ಯಾತಂಲ್ಲಿ? 'ನಿನ್ವಳ' ಲಾಭದಲ್ಲಿ. ಕರಾರಿನಲ್ಲಿ ಈ 'ನಿ-ವ್ವ-ಳ' ವೆಂಬ ಪದವನ್ನು ದಪ್ಪದಪ್ಪನಾದ ಅಕ್ಷರಗಳಲ್ಲಿ ಕಾಣಿಸಿದ್ದಾರೆ.

ಅನಂತರ ಈ ವಿಲಿಯಂ ಡಿಯಾರ್ಸಿಯು 'ದಿ ಆಂಗ್ಲೋ-ಪರ್ಷಿಯನ್ ಆಯಿಲ್ ಕಂಪೆನಿ, ಲಿಮಿಟೆಡ್' ಎಂಬ ಕಂಪೆನಿಯನ್ನು ರಚಿಸಿದನು. ಅದರಲ್ಲಿ ಮೂರರಲ್ಲಿ ಎರಡು ಭಾಗದಷ್ಟು ಸಾಮಾನ್ಯ ಷೇರುಗಳು ಆಂಗ್ಲೇಯ ಸಂಕಲ್ಪಿತದವರದು. ಈ ಸಾಮಾನ್ಯ ಷೇರು ಪ್ರತಿಯೊಂದಕ್ಕೂ ಎಂಡೆಂಡು ವೋಟುಗಳು. ಮತ್ತೆ ಪ್ರಿಫೆರೆನ್‌ಷಿಯಲ್ ಷೇರುಗಳ ಪೈಕಿ ಹತ್ತರಲ್ಲೊಂದು ಭಾಗವೂ ಅವರದೇಯೆ. ಇವುಗಳಲ್ಲಿ ಐದು ಷೇರುಗಳಿಗೊಂದೊಂದು ವೋಟು.

ಅಂದ ಮೇಲೆ, ಬ್ರಿಟಿಷ್ ಸರಕಾರಕ್ಕೇ ಹೆಚ್ಚಿಗೆ ವೋಟುಗಳು. ಇದರಿಂದ ಈ ಕಂಪೆನಿಗೆ ರಾಜಕೀಯ ಪ್ರಾಧಾನ್ಯವಿದೆಯೆಂದೂ, ರಾಜನೀತಿಗೆ ಒಳಪಟ್ಟಂತೆ ಅದು ನಡೆಯುವುದೆಂದೂ ಸ್ಪಷ್ಟವಾದಂತಾಯಿತು.

ಈ ಕಂಪೆನಿಯ ಬಂಡವಾಳವು. ಏ೨೦೦೦ 19450000 ಆದುದರಿಂದ ಈ ಕಂಪೆನಿಯು ಎಷ್ಟು ಭಾರಿ ಎಂಬುದು ತಿಳಿದು ಬರುತ್ತದೆ.

ಈಗ ಪರ್ಷಿಯಾ ಸರಕಾರದವರು ಇಂತಹ ಮಹೋನ್ನತವಾದ ಆಂಗ್ಲೇಯ ಸಂಕಲ್ಪದ ಬೆಂಬಲವುಳ್ಳ ಈ ಆಂಗ್ಲೇಯ ಕಂಪೆನಿಯ ರಹದಾರಿಯನ್ನು ರದ್ದು ಮಾಡಿದ್ದಾರೆ. ಇವರು ಹೀಗೆ ಮಾಡಲು ಪ್ರಬಲಕಾರಣಗಳಿದ್ದಿರಬೇಕು.

ಕಾರಣಗಳು.

ಕಂಪೆನಿಯವರು ೧೯೦೧ರಲ್ಲಿ ಪಾವತಿ ಮಾಡಿದ ರಾಜಾದಾಯವು ೨೯೦೦೦ ಏ೨೦೦೦ ಪೌಂಡುಗಳು ಮಾತ್ರ. ೧೯೨೫ರಲ್ಲಿ ಅದು ೭೫೦೦೦೦ ಏ೨೦೦೦ ಪೌಂಡುಗಳಿಗೇರಿತು. ಆದರೆ ತೆಗೆದ ಎಣ್ಣೆಗೂ ಕೊಟ್ಟ ರಾಜಾದಾಯಕ್ಕೂ ಬಹಳ ವ್ಯತ್ಯಾಸವಂತೆ.

ಮಹಾಯುದ್ಧವಾದಂದಿನಿಂದೀಚೆಗೆ ಡಳಿಯ ಪದ್ಧತಿಯಂತೆ ನಿನ್ವಳ ಲಾಭದ ಶೇ. ೧೬ ರಷ್ಟು ಸ್ವಲ್ಪವೂ ಸಮರ್ಪಕವಾಗಿರಲಿಲ್ಲ. ಆ ಮೇಲೆ ಕಂಪೆನಿಯು ಜಗತ್ತಿನ ಮಹಾ ಕಂಪೆನಿಯೊಂದಾಗಿತ್ತು.

ನಿನ್ವಳ ಲಾಭವೆಂದರೆ ಕಂಪೆನಿಯ ವಾರ್ಷಿಕ ಖರ್ಚುಗಳೆಲ್ಲವನ್ನೂ ಕಳೆದು ನಿಂತದ್ದು. ಆ ಖರ್ಚುಗಳಾದರೋ ಕಂಪೆನಿಯು ದೊಡ್ಡದಾಗುತ್ತಾ ಬಂದ ಹಾಗೆಲ್ಲಾ ಹೆಚ್ಚುತ್ತಲೇ ಬಂದಿದ್ದವು.

ಈ ಕಂಪೆನಿಯ ಬ್ರಾಂಚ್ ಆಫೀಸುಗಳು ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ ತೆರೆಯಲ್ಪಟ್ಟವು. ಎಷ್ಟೋ ಕಡೆ ಅನೇಕ ವಿಧಗಳಲ್ಲಿ ಖರ್ಚುಗಳು ಹೆಚ್ಚಾದವು. ಈ ಖರ್ಚುಗಳನ್ನು ಪರೀಕ್ಷಿಸಲು ಎಲ್ಲಿಯೋ ಇದ್ದ ಪರ್ಷಿಯಾ ಸರ್ಕಾರಕ್ಕೆ ಸಾಧ್ಯವಿಲ್ಲದೆ ಹೋಯಿತು. ಆದಕಾರಣ ತಮಗೆ ಸಲ್ಲತ್ತಿದ್ದ ರಾಜಾದಾಯವು ಸರಿಯಾಗಿದೆಯೇ ಇಲ್ಲವೇ ಎಂಬುದೇ ತಿಳಿಯಲಸಾಧ್ಯವಾಯಿತು.

ಕಂಪೆನಿಯವರ ಅಸಂಖ್ಯಾಕವಾದ ವೆಚ್ಚಗಳನ್ನು ನೋಡಿ ಪರ್ಷಿಯಾ ಸರ್ಕಾರಕ್ಕೆ ಅನುಮಾನವಾಗಲಾರಂಭವಾಯಿತು.

ಹೀಗಿರಲಾಗಿ ೧೯೨೫ರಲ್ಲಿ ರೀಜಾ ಷಹ ಪೆಹಲವಿಯವರ ಸರ್ಕಾರದವರು ತಮ್ಮ ರಿಪ್ರೆಸೆಂಟೇಟಿವ್ ಆರ್ಥ ಶಾಖಾ ಮಂತ್ರಿಯವರನ್ನು ಆಯಿಲ್ ಕಮಿಷನರನ್ನಾಗಿ ನಿಯಮಿಸಿದರು. ಈ ಹುದ್ದೇದಾರರು ಲಂಡನ್ನಿನಲ್ಲಿ ಇದ್ದುಕೊಂಡು ಆ ಎಣ್ಣೆಯ ಕಂಪೆನಿಯ ಕಚ್ಚೇರಿಯಲ್ಲಿ ಲೆಕ್ಕಗಳನ್ನು ನೋಡಬೇಕಾಗಿತ್ತು.

ಹಿಂದೆ ಲಂಡನ್ನಿನಲ್ಲಿದ್ದ ಪರ್ಷಿಯಾ ದೇಶದ ಪ್ರತಿನಿಧಿಗಳು ಎಣ್ಣೆಯ ಕಂಪೆನಿಯ ಲೆಕ್ಕಗಳಿಗೆ ಅಷ್ಟಾಗಿ ನಿಗ ಕೊಡುತ್ತಿರಲಿಲ್ಲ. ಕೆಲವು ಆ ಪ್ರತಿನಿಧಿಯ ಆಫೀಸಿನ ಹುದ್ದೇದಾರರು ಅಷ್ಟಾಗಿ ಪ್ರವೀಣ ಕರಾಗಿಯೂ ಇರಲಿಲ್ಲವಂತೆ.

ಲಂಡನ್ನಿಗೆ ಹೋದ ಪರ್ಷಿಯಾ ಮಂತ್ರಿಯು ಕಳುಹಿಸಿದ ವರದಿಗಳು ಮಹಾ ವಿಸ್ಮಯಜನಕವಾಗಿದ್ದವು.

ಹೆಚ್ಚೇಕೆ? ಪರ್ಷಿಯಾ ಸರ್ಕಾರದವರು ಕಂಪೆನಿಯ ಕರಾರನ್ನು ಬದಲಾಯಿಸಬೇಕೆಂದು ಕೇಳಿದರು. ಒಟ್ಟು ಆದಾಯದಲ್ಲಿ ರಾಜಾದಾಯವನ್ನು ಕೊಡಬೇಕೇ ಹೊರತು ನಿನ್ವಳ ಲಾಭದಲ್ಲಿ ಕೊಡದೆಂದರು.

ಈ ಸಂದಿಗ್ಧ ಸ್ಥಿತಿಯು ೧೯೩೧ರಲ್ಲಿ ಉಂಟಾಯಿತು. ಕಂಪೆನಿಯವರು ಈಗ ಆರ್ಥಿಕ ದುಸ್ಥಿತಿ—ಲಾಭಗಳು ಬಿದ್ದು ಹೋಗಿವೆಯೆಂಬುದಾಗಿ ಹೇಳಿದರು.

ಪರ್ಷಿಯಾ ಸರ್ಕಾರದವರು ನಿಮ್ಮ ಅನಾವಶ್ಯಕವಾದ ಹೆಚ್ಚಿಗೆ ವೆಚ್ಚಗಳನ್ನು ಕಡಿಮೆ ಮಾಡಿ ಬ್ಯಾಂಚಾಫೀಸು ಖರ್ಚುಗಳನ್ನು ತಗ್ಗಿಸಿ—ರಿಟ್ರೆಂಚ್‌ಮೆಂಟ್ ಮಾಡಿ ಎಂದರು.

ಅದಕ್ಕೆ ಕಂಪೆನಿಯವರು 'ನಮಗೆ ಹಾಗೆ ಮಾಡಿ ಹೀಗೆ ಮಾಡಿ ಎಂದು ಹೇಳಲು ನೀವು ಯಾರು?' ಎಂದರು.

ಈ ರೀತಿಯಾಗಿ ಆರು ವರ್ಷಗಳ ಕಾಲ ನಡೆಯಿತು ವ್ಯವಹಾರ. ಈ ಇಷ್ಟು ಕಾಲವೂ ಹೆಚ್ಚಿಗೆ ಶೇರುಗಳನ್ನಿಟ್ಟುಕೊಂಡಿದ್ದ ಆಂಗ್ಲೇಯ ಸರ್ಕಾರದವರು ಸುಮ್ಮನಿದ್ದರು.

ಕೊನೆಯಲ್ಲಿ ಆಂಗ್ಲೇಯರ ಜನ್ಮಶತ್ರು ಸೌವಾರ್ತ್ಯರ ಮುಂದೆ ಸಾಗಲಿಲ್ಲ—ಯಾಕೆಂದರೆ ಸೌವಾರ್ತ್ಯ ರಾಜ್ಯಗಳಲ್ಲಿಯೂ ಪ್ರಗತಿಯುಂಟಾಗಿದೆ. ಮೊದಲಿನಷ್ಟು ದಡ್ಡರಾಗಿಲ್ಲ.

....

ಎತನ್ಮಧ್ಯೆ ಪರ್ಷಿಯಾ ದೇಶದ ಮಂತ್ರಿ ಹನ್ಮುತ್ ಇಶಾಖಿಯವರು ಎಣ್ಣೆಯ ಕಂಪೆನಿಯವರು ಸ್ಥಳದಲ್ಲಿ ಎಷ್ಟರ ಮಟ್ಟಿಗೆ ಕರಾರಿನ ಶರತ್ತುಗಳನ್ನೂ ಪಾಲಿಸುತ್ತಿದ್ದಿರೆಂಬುದನ್ನು ನೋಡಿದರು. ಆಕ್ಷೇಪಣೆಗಳಿಗೆ ಎಷ್ಟೋ ಕಾರಣಗಳಿದ್ದವು.

ಕಂಪೆನಿಯವರು ಮೊಹಮ್ಮೇರ ಎಂಬ ಸ್ಥಳದಲ್ಲಿ ಸರ್ಕಾರದವರ ಅಪ್ಪಣೆ ಇಲ್ಲದೆ ದೊಡ್ಡ ಕಚೇರಿಗಳನ್ನು ಕಟ್ಟಿದರು.

ಸರಿ. ಅವರು ಆಕ್ಷೇಪಿಸಿದರು. ಕಂಪೆನಿಯವರು ಆ ಕಚ್ಚೇರಿಗಳನ್ನು ಖಾಲಿ ಮಾಡಬೇಕಾಯಿತು. ಷರತ್ತುಗಳ ಮೇರೆಗೆ ಅಬಡಾನ್ ಎಂಬ ಊರಿಗೆ ಸಾಗಿಸಿದರು. ಷರತ್ತಿನಲ್ಲಿ ಇನ್ನೂ ಒಂದು ಐಟಂ ಇದ್ದಿತು. ಕೆಲಸಕ್ಕೆ ಯೋಗ್ಯರಾದ ಪರ್ಷಿಯನ್ ಜನರು ಇದ್ದಲ್ಲಿ ವಿದೇಶಿಯರನ್ನು ನಿಯಮಿಸ ಕೂಡದೆಂದು ಇದ್ದಿತು.

ಈ ರೀಜಾ ಷಹಾರವರು ಗಾದಿಗೆ ಬಂದ ಮೇಲೆ 'ಈ ಷರತನ್ನು ಪಾಲಿಸಿ' ಎಂದರು. ಅದಕ್ಕೆ ಕಂಪೆನಿಯವರು ಭಾರಾ ಸಂಬಳ ಕೊಡಬೇಕಾದ ಕೆಲಸಗಳನ್ನು ತಮ್ಮವರಿಗೆ ಕೊಟ್ಟು ಸಣ್ಣ ಪುಟ್ಟ ನೌಕರುಗಳನ್ನು ಅವರಿಗೆ ಕೊಟ್ಟರು. ಪರ್ಷಿಯಾ ದೇಶದವರು ಪಾಪ! ಮೂವತ್ತು ವರ್ಷಗಳಾದರೂ ಆ ಕೆಲಸಗಳಿಗೆ ಲಾಯಕ್ಕಾಗಿರಲಿಲ್ಲವಂತೆ! ಭಾರತೀಯರಿಗೆ ಈ ರೀತಿ ಹೇಳುವುದರ ಮರ್ಮ ಚೆನ್ನಾಗಿ ತಿಳಿದೇ ಇದೆ.

ಈಗ ಪರ್ಷಿಯಾ ಸರ್ಕಾರದವರು ಆ ಕರಾರೇ ಸಂಯಿಷ್ಟವೆಂದು ರದ್ದು ಮಾಡಿದ್ದಾರೆ.

ಆಂಗ್ಲೇಯರು 'ನೀವು ಸುಮ್ಮನೆ ಎಂದಿನಂತೆ ಇರುವಿರೋ ಇಲ್ಲವೋ ಹೇಗ್ ಕೋರ್ಟಿಗೆ ಬರುತ್ತೀರೋ?' ಎಂದು ಕೇಳಿದರು.

ಪರ್ಷಿಯಾ ಸರ್ಕಾರದವರು ಆ ಬೆದರಿಕೆಗೆ ಬಗ್ಗಲಿಲ್ಲ. ಕೊನೆಗೆ ಆಂಗ್ಲೇಯರು 'ನೋಡೋಣ ನಮ್ಮ ಕೈಲಾದುದೆಲ್ಲವನ್ನು ಮಾಡಿ ನೋಡುತ್ತೇವೆ' ಎಂದು ಹೇಳಿಯುವುದಲ್ಲದೆ ಪ್ರಶ್ನೆಯು ಜಿನೀವಾದ ಅಂತರ್ರಾಷ್ಟ್ರೀಯ ಪರಿಷತ್ತಿಗೆ ಹೋಗಿದೆ ವಿಚಾರಣೆಗೆ.

'ಪ್ರಜಾಮತ'

WANTED.

Candidates for Electrical Courses. Highest Successes in London Guilds examinations. Railfare paid. Rules on 3 anna stamps.

TECHNICAL INSTITUTE OF INDIA LTD., WARLI, Bombay, 18.

C—5

ಕೊಡಗಿನಲ್ಲಿ ಸತ್ಯಾಗ್ರಹ.

ವೀರಾಜಪೇಟೆ ಪಬ್ಲಿಕ್ ಮಿಟಿಂಗಿನಲ್ಲಿ ಮೂವರ ದಸ್ತಗಿರಿ.

ಮೆ. ಪಿ. ಐ. ಬೆಳ್ಯಪ್ಪನವರ ಮೂರನೇ ಸೆರೆಮನೆ ಯಾತ್ರೆ!

ಹರಿದಾಸರ ಮೇಲೆ 144ನೇ ಸೆಕ್ಷನಿನ ರಾಮಬಾಣಪ್ರಯೋಗ.

ಈ ತಾ. 11ನೇ ಬುಧವಾರ ದಿನ ಮಧ್ಯಾಹ್ನದ ಮೇಲೆ 3½ ಗಂಟೆಗೆ ರೀಡಿಂಗ್ ರೂಮ್ ಬಳಿ ಸುಮಾರು 500 ಜನರು ಸೇರಿದ್ದ ಸಾರ್ವಜನಿಕ ಮಿಟಿಂಗಿನಲ್ಲಿ ಶ್ರೀಯುತ ಪಂಡ್ಯಂಡ ಬೆಳ್ಯಪ್ಪನವರು ಭಾಷಣಮಾಡ ತೊಡಗಿದರು. ಜನರು ಸೇರುತ್ತಿದ್ದಾಗ್ಯೆ ಭಾಷಣಕ್ಕೆ ಮೊದಲು ಪೊಲೀಸ್ ಸಬ್ ಇನ್‌ಸ್ಪೆಕ್ಟರು ಎಂಥಾ ಮಿಟಿಂಗೆಂದು ವಿಚಾರಿಸಿದರೂ ನಿಜ ಸಂಗತಿ ತಿಳಿಯಲಾಗದೆ ಹೋದರು. ಹಸ್ತಪತ್ರಗಳಿಗಾಗಿ ಇಬ್ಬರು ಸ್ವಯಂ ಸೇವಕರ ಹತ್ತ ಇದ್ದ ಸಾಮಾನುಗಳನ್ನೆಲ್ಲಾ ಪೊಲೀಸಿನವರು ಹುಡುಕಿದರೂ ಏನೂ ದೊರೆಯಲಿಲ್ಲ. ನಂತರ ಶ್ರೀ. ಪಿ ಬೆಳ್ಯಪ್ಪನವರು ಹಿಂದೂಸ್ಥಾನದ ಈಗಿನ ರಾಜಕೀಯ ಪರಿಸ್ಥಿತಿಯನ್ನು ಕುರಿತು ಭಾಷಣಮಾಡ ತೊಡಗಿದರು 5 ನಿಮಿಟು ಭಾಷಣಮಾಡುವಷ್ಟರಲ್ಲಿ ಸಬ್ ಇನ್‌ಸ್ಪೆಕ್ಟರವರು ಮೆ. ಬೆಳ್ಯಪ್ಪನವರನ್ನು ಕೈದುಮಾಡಿದರು ಆಗ್ಯೆ ಶ್ರೀಯುತರುಗಳಾದ ಪುಲಿಯಂಡ ಸುಬ್ಬಯ್ಯನವರು ಮತ್ತು ಹೆಚ್. ಬಿ. ತಮ್ಮಯ್ಯನವರು ಜಯಘೋಷಮಾಡಿದರು. ಅವರಿಬ್ಬರನ್ನೂ ದಸ್ತಗಿರಿಮಾಡಿ ಮೂವರನ್ನೂ ಅಸ್ಪತ್ರಿಗಾಗಿರುವ ಒಳದಾರಿಗಾಗಿ ಪೊಲೀಸು ಲಾಕಪ್ಪಿಗೆ ಕರೆದುಕೊಂಡುಹೋದರು.

ತಾ. 12ರಲ್ಲಿ ಇವರ ಮೂವರ ವಿಚಾರವು ಮುನ್ಸೀಫ್ ಕೋರ್ಟಿನಲ್ಲಿ ನಡೆಯಿತು. ಶ್ರೀ. ಪಿ. ಐ. ಬೆಳ್ಯಪ್ಪನವರಿಗೆ 3 ತಿಂಗಳು ಕಠಿಣ ಸಜೆ ಮತ್ತು 50 ರೂ. ಜುಲುಮಾನೆಯೂ, ಶ್ರೀ ಸುಬ್ಬಯ್ಯ ಮತ್ತು ತಮ್ಮಯ್ಯನವರಿಗೆ ಮೂರು ಮೂರು ತಿಂಗಳ ಕಠಿಣ ಸಜೆ ಮತ್ತು ಮೂವತ್ತು ರೂ. ಜುಲುಮಾನೆಯೂ, ಜುಲುಮಾನೆ ಕೊಡಲು ತಪ್ಪಿದರೆ ಮೂವರಿಗೂ ಒಂದೊಂದು ತಿಂಗಳ ಹೆಚ್ಚಿನ ಸಜೆಯೂ ವಿಧಿಸಲಾಯಿತು. ಜಡ್ಜ್‌ಮೆಂಟಿನಲ್ಲಿ ಇವರ ಪೈಕಿ ಶ್ರೀ. ಬೆಳ್ಯಪ್ಪನವರನ್ನು 'ಬಿ. ಕ್ಲಾಸಿನಲ್ಲಿಡಲು ಸಿಫಾರಸ್ಸುಮಾಡಲಾಗಿದೆ. ಮರುದಿನ ಇವರನ್ನು ಕಣ್ಣಾನೂರು ಸೆಂಟ್ರಲ್ ಜೈಲಿಗೆ ಕಳುಹಿಸಲಾಯಿತು.

ಹರಿದಾಸರಾದ ಶ್ರೀಯುತ ಗೋಪಾಲ ದಾಸರವರು ಕಳೆದ ಡಿಸೆಂಬರ್ ತಾ. 31ರಲ್ಲು ಗೋಣಿಕೊಪ್ಪಲು ಭಜನೆ ಮಂದಿರದಲ್ಲು ಹರಿಕಥೆನೂಡುತ್ತಿದ್ದಾಗ್ಯೆ ಅವರಿಗೆ 144ನೇ ಸೆಕ್ಷನ್ ಜಾರಿಮಾಡಲಾಯಿತೆಂತಲೂ ತನ್ನನಂತರ ಹರಿದಾಸರು ತಾನು ಕಥೆನೂಡುತ್ತಿದ್ದದನ್ನು ನಿಲ್ಲಿಸಿದ್ದರಿಂದ, ಬೇರೊಬ್ಬರು ಕಥೆಯನ್ನು ಮುಂದರಿಸದರೆಂತಲೂ, ಸದರಿ ಹರಿದಾಸರು ದಕ್ಷಿಣ ಕೊಡಗಿನಲ್ಲಿ ಎಲ್ಲಿಯೂ ಹರಿಕಥೆ ನಡಿಸಲಾಗದೆಂತ ನೋಟೀಸಿನಲ್ಲಿ ನಮೂದಿದೆಯೆಂತಲೂ ತಿಳಿಯುತ್ತೇವೆ.

ಒಳದೇಶ.

ಈ ವಾರ ಮಡಿಕೇರಿಯಲ್ಲಿ ಕಾಫಿಯ ಬೆಲೆಯು ಖಂಡಿಗೆ ರೂ. 233 ಇದೆಯೂಗಿ ವರ್ತಮಾನ.

ಫಾರೆಸ್ಟು ಇಲಾಖೆಯ ಸಬ್ ಡಿವಿಜನ್ ಆಫೀಸರಾದ ಮೆ. ಬ್ರಾಂಡ್‌ರವರು ಇಲ್ಲಿಂದ ವರ್ಗಾಯಿಸಲ್ಪಡುವರೆಂದೂ, ಇವರ ಬದಲಿಗೆ ಮೆ. ಸಿ ಜಿ. ವಾನ್ ಹೆಸ್ಟನ್‌ರವರು ಬರುವರೆಂದೂ ತಿಳಿಯುತ್ತೇವೆ.

ಮೂಸಿಕ ಸಂಬಳದ ಮೇರೆ ಮಡಿಕೇರಿ ಮತ್ತು ವೀರಾಜಪೇಟೆಯಲ್ಲಿ ಆಫೀಮು ಮೂರಲು ಟೆಂಡರುಗಳನ್ನು ತಾರೀಕು 22—2—33ರ ಒಳಗೆ ಅಸಿಸ್ಟೆಂಟ್ ಕಮಿಶನರವರಿಗೆ ತಲಪುವಂತೆ ಕಳುಹಿಸಬೇಕೆಂದೂ, ರೂ. 25 ಡಿವಾಜಿಟ್ಟು ಇಡಬೇಕೆಂದೂ ಪ್ರಕಟವಾಗಿದೆ.

ಕಳಕೇರಿ ನಿಡುಗಣೆ ಗ್ರಾಮದ ಮೆ. ಬಿ. ಎನ್. ವೀರಭದ್ರ ಶೆಟ್ಟಿಯವರ ತೋಟದಲ್ಲಿ ಮಂದೋಡಿ ಅಚ್ಚಯ್ಯನೆಂಬವರು ಅಲ್ಲಿ ಹಾವಳಿನೂಡುತ್ತಿದ್ದ ಒಂದು ಕರಿ ಹುಲಿಯನ್ನು ತಾ. 3—1—33ರಲ್ಲು ಗುಂಡುಹೊಡೆದು ಕೊಂದಿರುವರಂತಾಗಿ ತಿಳಿಯುತ್ತೇವೆ.

ಕೊಡಗಿನಲ್ಲಿ ಬೆಲ್ಲದ ಸರಾಯನನ್ನು ಸರಕಾರಕ್ಕೆ ಕಂಟ್ರಾಕ್ಟು ಮೂಲಕ ಸಪ್ಲೈಮಾಡಲು ಇಷ್ಟಪಡುವವರು ಟೆಂಡರುಗಳನ್ನು ತಾ. 31—1—1933ರ ಮಧ್ಯಾಹ್ನ 12 ಗಂಟೆಯೊಳಗೆ ಕಮಿಶನರವರಿಗೆ ಕಳುಹಿಸಬೇಕಾಗಿಯೂ ಮತ್ತು ಟೆಂಡರು ಸಂಗಡ ರೂ. 1000 ಡಿವಾಜಿಟ್ಟು ಇಡಬೇಕೆಂದೂ ಪ್ರಕಟವಾಗಿದೆ.

ತಾ. 6—1—33ರಲ್ಲು ನಡೆದ ಗೋಣಿಕೊಪ್ಪಲು ಜಾತ್ರೆಯ ವಾರುಗಳ ಪ್ರದರ್ಶನವನ್ನು ಕಮಿಶನರವರೂ, ಮಿಸೆಸ್ ಟಿಪ್ಪಿಂಗ್‌ರವರು ಅದೇ ಸಾಯಂಕಾಲ ಮೂರು ಗಂಟೆಗೆ ನೇಯಿಗೆ ಮತ್ತು ಹೊಲಿಗೆ ಸಾಮಾನುಗಳ ಪ್ರದರ್ಶನವನ್ನೂ ಮತ್ತು ತಾ. 7—1—33ರಲ್ಲು ದೇವಣಗೇರಿ ಗ್ರಾಮದ ಮಿಸೆಸ್ ಮೂಕ್ಕಾಟಿರ ಅಪ್ಪಚ್ಚನವರು ಹಸರುವಾಣಿಗಳ ಪ್ರದರ್ಶನವನ್ನೂ ತೆರೆದರಾಗಿಯೂ ಮತ್ತು ಪ್ರದರ್ಶನವು ಮೊದಲಿನ ವರ್ಷಗಳಿಗಿಂತಲೂ ಬಹು ವಿಜೃಂಭಣೆಯಿಂದ ಜರುಗಿತಾಗಿ ತಿಳಿಯುತ್ತೇವೆ.

ಈ ಕೆಳಗಿನವರಿಗೆ ಮೊದಲನೇ ಇನಾಮುಗಳು ದೊರಕಿವೆಯೂಗಿ ವರ್ತಮಾನ.

ಕೊಡಗಿನ ಒಳ್ಳೆ ಗೂಳಿ ಎತ್ತಿಗೆ ಪೊಳ್ಳಬೆಟ್ಟದ ಕೊರಗಪ್ಪನವರಿಗೆ ಚಿನ್ನದ ಪದಕ.

ಮೈಸೂರು ಗೂಳಿ ಎತ್ತಿಗೆ ಸಿದ್ದೇ ಗೌಡರವರಿಗೆ ಚಿನ್ನದ ಪದಕ.

ಓಡುವ ಎತ್ತುಗಳಿಗೆ ಹಾತೂರು ಅಣ್ಣೇಗೌಡರಿಗೆ.

ಭಾರ ಎಳೆಯುವ ಎತ್ತುಗಳಿಗೆ ಪಿರಿಯಾ ಪಟ್ಟಣದ ಸಾಂತಪ್ಪನವರಿಗೆ.

ಕರೆಯುವ ಹಸಿ ದೊಡ್ಡ ಜಾತಿಗೆ ಹಂಚಿ ಬೆಟ್ಟದ ಮೂದಪ ಮೇಸ್ತ್ರಿಗೆ.

ಕರೆಯುವ ಹಸಿ ಸಣ್ಣ ಜಾತಿಗೆ ಹಂಚಿ ಬೆಟ್ಟದ ಮೂಧಪ ಮೇಸ್ತ್ರಿಗೆ.

ಹೋರಿ ಕರಕ್ಕೆ ಪೊಳ್ಳಬೆಟ್ಟದ ಬದ್ರಯ್ಯನವರಿಗೆ.

ಹಸು ಕರಕ್ಕೆ ಮಿಸ್ ಪಿ. ಜೆ ಟಿಪ್ಪಿಂಗ್‌ರವರಿಗೆ.

ಹೋರಿ ಕರಕ್ಕೆ " "

ಕರೆಯುವ ಎಮ್ಮೆಗೆ ಎಳತಂಡ ಜಳಂಗಪ್ಪನವರಿಗೆ.

ಹಣ್ಣು ಮತ್ತು ತರಕಾರಿ ಪ್ರದರ್ಶನದಲ್ಲಿ ಮೆ. ಗಳಾದ ಯಸ್. ಕೆ. ಗಣಪತಿಯವರಿಗೆ, ಅಜ್ಜಿಕುಟ್ಟಿರ ಬೆಳ್ಯಪ್ಪನವರಿಗೆ. ಸಿ. ಪಿ. ಮುದ್ದಪ್ಪನವರಿಗೆ, ಮನೆಯಪಂಡ ಅಪ್ಪಯ್ಯನವರಿಗೆ, ಐಚೆಟ್ಟಿರ ಕುಟ್ಟಪ್ಪನವರಿಗೆ, ಪಡಿಕಲ್ ಪೂವಯ್ಯನವರಿಗೆ, ಮತ್ತು ಕೊಡಂದೇರ ಚಂಗಪ್ಪನವರಿಗೆ ಒಂದೇ ಇನಾಮುಗಳೂ ನೇಯಿಗೆ ಮತ್ತು ಹೊಲಿಯುವ ಪ್ರದರ್ಶನದಲ್ಲಿ ಮೆ ಗಳಾದ ಸಿ. ಪಿ. ಮುಂದಣ್ಣನವರಿಗೆ ಜಿ. ಎ. ರೂರವರಿಗೆ, ವಿ.ಸ್ ಕೊಂಗಾಂಡ ಸುಬ್ಬಮ್ಮನವರಿಗೆ, ಏ ಸ್ ಪಾಲೇಕಂಡ ಮುತ್ತಮ್ಮನವರಿಗೆ, ಮಿಸ್. ಬಾಳ್ಯಡ ಸೀತಮ್ಮನವರಿಗೆ, ಮತ್ತು ಎಸೆಸ್ ಮನೆಯಪಂಡ ತಂಗವ್ವನವರಿಗೆ ಒಂದೇ ಇನಾಮುಗಳೂ ಮತ್ತು ಇತರರಿಗೆ ಇನ್ನೂ ಅನೇಕ ಇನಾಮುಗಳೂ ದೊರಕಿವೆಯೆಂತಾಗಿ ತಿಳಿಯುತ್ತೇವೆ.

ಹಿಂದೂದೇಶ.

ಫೆಡರಲ್ ರಾಜ್ಯಭಾರ ಪದ್ಧತಿಯ ವಿಷಯವಾಗಿ ಹೋರರು ಅತುರವುಳ್ಳವರಾಗಿರುವರೆಂದು ಸರ್ ಸಪ್ರುಗಳವರ ಹೇಳಿಕೆ.

ಖೈರಾ ಜಿಲ್ಲೆಯಲ್ಲಿ ಕೃತಿಕ ನಾಣ್ಯಗಳನ್ನು ತಯಾರಿಸುವ ಕಾರ್ಖಾನೆಯೊಂದು ಪೊಲೀಸರಿಂದ ಕಂಡುಹಿಡಿಯಲ್ಪಟ್ಟಿದೆ.

ಬೊಂಬಾಯಿಯ ಹಿಂದೀ ವರ್ತಕ ಸಂಘದವರು ರಾಜಕೀಯ ಕೈದಿಗಳ ಬಿಡುಗಡೆಗಾಗಿ ವೈಸರಾಯರಿಗೆ ವಿನಂತಿ ಕಳುಹಿಸಿರುವರು.

ಬೊಂಬಾಯಿಯಲ್ಲು ದಸ್ತಗಿರಿ ಮಾಡಲ್ಪಟ್ಟ ಮೂರು ಬ್ಯಾರಿಸ್ಟರುಗಳ ಮನೆಯನ್ನು ಜಪ್ತಿಮಾಡಲು ಕೆಲವು ಕಾಂಗ್ರೆಸ್ ಹಸ್ತಪತ್ರಗಳು ದೊರೆತವಂತೆ.

ತಾ. 7 ರಲ್ಲು ಕಲ್ಕತ್ತದಲ್ಲು ಸ್ವದೇಶಿ ವಸ್ತುಗಳನ್ನು ಕೊಳ್ಳಿ ಎಂಬ ಹಸ್ತ ಪತ್ರಿಕೆಗಳನ್ನು ಹಂಚುತ್ತಿದ್ದ ಮೂರು ತರುಣರು ದಸ್ತಗಿರಿ ಮಾಡಲ್ಪಟ್ಟಿರುವರು. ಇವರು ಕಂದಾಯ ನಿರಾಕರಣದ ಹಸ್ತಪತ್ರಿಕೆಯನ್ನು ಹಂಚುತ್ತಿದ್ದರಂತೆ.

ಪೇಶಾವರಿನ ಡೇರಾ ಇಸ್ಮಾಯಿಲ್ ಖಾನ್ ಜೈಲಿನಲ್ಲಿ ಅಲ್ಲಿ ಪೇಶಾವರ್ ಮತ್ತ ಬನ್ನು ವಶ್ಯಾಂತ್ಯದ ಖೈದಿಗಳಿಗೆ ಸೈಕೈ ಹತ್ತಿ 25 ಖೈದಿಗಳಿಗೆ ಘಾಯವಾಗಿದೆಯೆಂದೂ ಮತ್ತು 6 ಖೈದಿಗಳು ಮೃತಪಟ್ಟಿರುವರೆಂದು ತಿಳಿಯುತ್ತೇವೆ.

ಕರ್ಣಾಟಕ ಸುಪ್ರಸಿದ್ಧ ವಿದ್ವಾಂಸರೂ, ಕವಿಗಳೂ ವಿದುಷ್ಕರೂ ಆಗಿದ್ದ ಶ್ರೀ ಆರ್. ತಾತ, ಯಂ. ಎ. ಎಲ್. ಇವರು ನಿಮೋನಿಯ ಕಾಯಿಲೆಯಿಂದ ಮದ್ರಾಸಿನಲ್ಲಿ 30—12—32 ರಲ್ಲು ಪರಂಧಾಮವನ್ನೈದಿದರೆಂದು ತಿಳಿಯಲು ಅತ್ಯಂತ ವಿಷಾದಿಸುತ್ತೇವೆ.

ಕಾಸ್ಮಿಯಲ್ಲಿ ಸಂಪ್ರಸಿದ್ಧಿಯನ್ನು ಪಡೆದ ಗಾಮನು ತನ್ನ ಸಹೋದರ ಆದ ಇವನಿಗೆ ಒಕ್ಕನನ್ನು ಸೋಲಿಸಿದವರಿಗೆ 11 ಸಾವಿರ ರೂ. ಗಳನ್ನೂ ಮತ್ತು ತನ್ನ ಮಗನಾದ ಜೋಟಗಾನುನನ್ನು ಸೋಲಿಸಿದವರಿಗೆ 7 ಸಾವಿರ ರೂ. ಗಳನ್ನು ಬಹುಮಾನವಾಗಿ ಕೊಡುವುದಾಗಿ ಪ್ರಕಟಿಸಿರುತ್ತಾನೆ.

ದೇಹಲಿ ನಗರದಲ್ಲಿ 'ಗಾಂಧಿಡೇ' ಸಂಬಂಧವಾಗಿ ಕಬ್ಬಿಣದ ಮತ್ತು ಒಟ್ಟಿ ಅಂಗಡಿ ಮೊಕ್ಕಟ್ಟು ಪ್ರದೇಶದಲ್ಲಿ ಹರತಾಳ ನಡೆಯಿತು. ಅಲ್ಲಿನ ಒಂದು ದೊಡ್ಡ ಗಡಿಯೂರಿನ ಹತ್ತಿರ ರಾಷ್ಟ್ರೀಯ ಭಾವುಟವನ್ನು ಹಿಡಿದುಕೊಂಡಿದ್ದ ನಾಲ್ಕು ಮಂದಿ ಸ್ವೀಯರನ್ನು ಪೊಲೀಸಿನವರು ದಸ್ತಗಿರಿ ಮಾಡಿ ನೂರಿದ್ದವರನ್ನು ಚದರಿಸಿದರು.

ನಿತ್ಯದಲ್ಲೂ ಸ್ನಾನಮಾಡಿ ವಿಘ್ನೇಶ್ವರನ ಧ್ಯಾನಮಾಡುವೆವು. ಇಂದಿನಿಂದ ಮೊಸರನ್ನೂ, ಮಧ್ಯಪಾನವನ್ನೂ ತ್ಯಜಿಸಿ ಶಾಕಾಹಾರವನ್ನು ಮಾಡುವೆವು ಎಂಬ ಶಪಥವನ್ನು ಕರಾಚಿಯು ಹರಿಜನರಲ್ಲಿ ಅನೇಕರು ತಮ್ಮ ಕುಲಗುರುವಾದ ದೇವಶ್ರನು ಗೋಪಾಲರವರ ಬೋಧನೆಯನ್ನನುಸರಿಸಿವರ್ತಿಸುತ್ತಾರೆ.

ಜನವರಿ ತಾ. 7 ರಲ್ಲು ಡೆಲ್ಲಿಯ ಜುಮ್ಮಾ ಮಸೀದಿಯ ಬಳಿ ಬಾಂಬು ಸಿಡಿತದಿಂದ ಇಬ್ಬರು ಮುಸ್ಲಿಮರಿಗೆ ಘಾಯಗಳಾಗಿವೆ. ಒಬ್ಬನು ಬಾಂಬು ಬಾಂಬಿನ ಮೇಲೆ ಅಕಸ್ಮಿತವಾಗಿ ತುಳಿದಾಗ ಒಡೆಯಿತು. ಆದರೆ ಅಪಾಯಕರವಾದ ಜಖಂ ಏನೂ ಆಗಿರುವುದಿಲ್ಲ. ಅದೇ ಸ್ಥಳದಲ್ಲಿ ಇನ್ನೆರಡು ಬಾಂಬುಗಳನ್ನು ಪೊಲೀಸರು ಪತ್ತೆ ಮಾಡಿದರು. ಆದರೆ ದಸ್ತಗಿರಿಗಳೇನೂ ಆಗಿರುವುದಿಲ್ಲ.

ನಾಗಪುರದ ಕಾಂಗ್ರೆಸ್ ಸೇವಕರಾದ ಮೆ. ಟೀಕೆಕಾರ್ ಎಂಬವರು ರಾಜದ್ರೋಹದ ಸಂಭವನೀಯವಾದ ಭಾಷಣ ಮಾಡಿರೆಂದು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ವಿಚಾರಣೆಗಿದ್ದಿತು. ಅಪರಾಧಿಯು ಬಾಂಡು ಸಾವಿರ ರೂಪಾಯಿಯ ಬಾಂಡು ಬರೆದುಕೊಟ್ಟು ಆ ಮೊಬಲಗಿಗೆ ಇಬ್ಬರನ್ನು ಜಾಮೀನುಕೊಡಬೇಕೆಂದು ಮ್ಯಾಜಿಸ್ಟ್ರೇಟರು ಆಜ್ಞೆಮಾಡಿದಕ್ಕೆ ಅವರು ಒಪ್ಪದ ಕಾರಣ ಅವರಿಗೆ ಒಂದು ವರ್ಷದ ಸಾದಾ ಸಜೆ ವಿಧಿಸಲಾಗಿದೆ.

ಐರ್ಲಂಡಿನ ಪ್ರಜಾಪ್ರಭುತ್ವದ ಪ್ರೆಸಿಡೆಂಟರಾದ ಮೆ. ಡಿವೇಲೆರವರು ಪಾರ್ಲಿಮೆಂಟ್ ಸಭೆಯನ್ನು ವಿಸರ್ಜಿಸಿ ಮುಂದಿನ ಕಾರ್ಯ ವಹಿಸಿದರು. ಹೊಸ ಚುನಾವಣೆಯು ಇದೇ ತಾ. 24ರಲ್ಲು ನಡೆಯಲಿಕ್ಕಿರುವುದು.

ಮೂರಾಟಕ್ಕಿದೆ.

ಒಂದು ಎಂಪೈರ್ ಟೈಪ್ ರೈಟರ್. ಬಲ. ಸೆಕೆಂಡ್ ಹ್ಯಾಂಡ್ ಗಿದೆ. ಕ್ರಯ 100 ರೂಪಾಯಿ ಮಾತ್ರ.

ವಿಳಾಸ—ಮೇನೇಜರ್,
ಬಲಿಯಮಟ್ಟಿ ತೋಟ,
ಸುಂಟಿಕೊಪ್ಪ,
ಕೊಡಗು.

1—1

Wanted.

Assets 17500000 Exceeds. | Pre—Income 33 Lacks.

Realy Capable and Influential **Special Agent** having organising Capacity either on commission basis or salary for the NATIONAL INSURANCE CO. LTD. Calcutta. (Est. 1906.)

Please apply to—

CHIEF ORGANISER
National Insurance Co. Ltd.
Arcot Srinivas Char St.
12—3 Bangalore City.

ಹೆಮ್ಮಕ್ಕಳ ತಾಯಿಂದಿರಲ್ಲಿ ಒಂದು ವಿನಂತಿ.

("ಸರಸ್ವತಿಯವರ ಲೇಖನ)

ಲೋಕದಲ್ಲಿ ಹೆಂಗಸರ ಕರ್ತವ್ಯವು ಬಹಳ ಕಷ್ಟವಾ ಮತ್ತು ತುಂಬಾ ಜವಾಬ್ದಾರಿಕೆಯುಳ್ಳ ಕೆಲಸವಾಗಿದೆ. ಏ ದರೆ, ಅವಳಿಂದಲೇ ಮುಂದಿನ ಜನಾಂಗದ ಭವಿಷ್ಯತ್ತು ಅಳ ಹೊಂದಲಿರುವುದು ಮತ್ತು ಹೊಂದುತ್ತಲಿರುವುದು. ಅವ ಸಾಕುತ್ತಲಿರುವುದು. ಅವಳು ಸಾಕುತ್ತಿರುವ ಮಕ್ಕಳ ಪ್ರೌ ಜನಾಂಗವನ್ನೇ ಉದ್ಧರಿಸುವ ಶಕ್ತಿಯುಳ್ಳ ಪುಣ್ಯಾತ್ಮರೊಬ್ಬ ಬೆಳೆಯುತ್ತಿರಬಹುದು—ಇಲ್ಲವೇ ಜನಾಂಗಕ್ಕೇ ಹಾನಿಯನು ಟುಮಾಡುವ ದುಷ್ಟನೇ ಪುಷ್ಟನಾಗುತ್ತಿರಬಹುದು. ಇವ ರಿಗೂ ಜನ್ಮದಾತೆಯಾದ ತಾಯಿಯೇ ಕಾರಣಳಾದರೆ ಅಕೆ ಜವಾಬ್ದಾರಿಕೆಯು ಎಷ್ಟಿರಬಹುದೆಂಬುವುದನ್ನು ತಾಯಿ ಯೋಚಿಸಿ ನನ್ನ ವಿಜ್ಞಾಪನೆ ಸ್ವೀಕರಿಸಲಿ. ಮುಖ್ಯವಾ ಹೆಣ್ಣು ಮಕ್ಕಳ ತಾಯಿಂದಿರಲ್ಲಿಯೇ ನನ್ನ ಈ ಸಣ್ಣ ವಿಜ್ಞಾಪನೆ.

ನಮ್ಮ ಭಾರತ ವರ್ಷದ ರಮಣಿಯರು ಈ ವಿಷಯ ತಮ್ಮ ಜನ್ಮಭೂಮಿಯ ಕಡೆ ಇರುವ ತಮ್ಮ ಕರ್ತವ್ಯವ ಬಹುಮಟ್ಟಿಗೆ ಮರೆಯುವಂತಿದೆ. ಮಕ್ಕಳನ್ನು ಸಾಕಿ ವರನ್ನಾಗಿ ಮಾಡಿದರೆ ಮಾತ್ರ ಸಾಲದು. ಅವರನ್ನು ಯೋ ರೀತಿಯಲ್ಲಾದರೂ ಜನಾಂಗ ಸೇವೆಯನ್ನು ಮಾಡಲು ಥರನ್ನಾಗಿಯೂ ತಮ್ಮ ಕರ್ತವ್ಯದಲ್ಲಿ ಶ್ರದ್ಧೆ ಮತ್ತು ಧೈ ವುಳ್ಳವರನ್ನಾಗಿಯೂ ತಿದ್ದಿದರೆ ಮಾತ್ರ ಒಬ್ಬ ತಾಯಿಯ ಎಕ್ಕವಾದ ಕರ್ತವ್ಯವು ಪೂರ್ತಿಯಾಯಿತೆಂದು ಹೇಳಬಹ

ಜನನೀಯುರೇ ಮಕ್ಕಳಿಗೆ ಮುಖ್ಯವಾಗಿ 3—4ನೇ ವಯಸಿನಲ್ಲಿಯೇ ವಿದ್ಯೆಯನ್ನು ಪ್ರಾರಂಭಿಸಿರಿ. ವಿದ್ಯೆಯೆಂದರೆ ಶಾಲೆಗೆ ಹೋಗುವುದು ಮತ್ತು ಓದು ಬರಹ ಅಭ್ಯಾಸಿಸುವುದು ಮಾತ್ರವೇ ಅಲ್ಲ. ಮನೆಯಲ್ಲಿ ಅವರಿಂದ ಚಿಕ್ಕ ಪುಟ್ಟ ಕೆಲಸವನ್ನು ಮಾಡಿಸಿಕೊಳ್ಳುವದು ಮತ್ತು ಇತರರೊಂದಿಗೆ ಎಂದರೆ ತಮ್ಮ ಹಿರಿಯವರಲ್ಲಿ ಮತ್ತು ತಮ್ಮ ಸಹವಾಸಿಗಳಲ್ಲಿ ಹೇಗೆ ಹೇಗೆ ವರ್ತಿಸಬೇಕೆಂಬದನ್ನು ಕಲಿಸುವುದು. ನಿಮ್ಮ ಹೆಣ್ಣು ಮಕ್ಕಳು ಎಫ್. ಎ. ಬಿ. ಎ. ವರೆಗೆ ಓದಿ ಡಿಗ್ರಿಯೊಂದನ್ನು ಪಡೆದರೆಂದರೆ ನಮ್ಮ ಕೆಲಸವು ಮುಗಿಯಿತೆಂದು ಎಣಿಸಬೇಡಿರಿ. ಅವರು ಬೇಕಾದ ಸನ್ನದುಗಳನ್ನು ಮತ್ತು ಡಿಗ್ರಿಗಳನ್ನು ಸಂಪಾದಿಸಿಕೊಂಡರೂ ತಮ್ಮ ಕರ್ತವ್ಯವನ್ನು ಮರೆತರೇ ಇವರ ಸ್ವಾಧೀನದಲ್ಲಿದ್ದ ಡಿಗ್ರಿಗಳು ಒಬ್ಬ ಸಂಗನ ಹಸ್ತದಲ್ಲಿರುವ ಮೂಣ್ಯಕ್ಕಿದಷ್ಟು ಬೆಲೆಯುಳ್ಳದಾಗುವುದು. ವಿಶ್ವ ವಿದ್ಯಾಲಯಕ್ಕೆ ಹೋಗುವ ಈಗಿನ ಭಾರತ ತರುಣಿಯರಿಗೆ ಅಡಿಗೆ ಮನೆಯ ವಿಷಯ ಏನೊಂದೂ ತಿಳಿಯದು ಇಂಥಾ ಹುಡುಗಿಯರಿಗೆ ಮನೆಯನ್ನು ತಕ್ಕೊಬ್ಬಳೇ ನಡಿಸಬೇಕಾದ ಸನ್ನಿವೇಶ ಬಂದೊದಗಿದರೆ ಅವಳು ಏನು ಮಾಡಬಲ್ಲಳು? ಇಂಥಾ ಸಂದರ್ಭಗಳಲ್ಲಿ ಭಾರತೀಯರ ಮನೆಯಲ್ಲಿ ಮುಖ್ಯವಾಗಿ ಹಿಂದು ಮನೆಗಳಲ್ಲಿ ನಡೆಯುವ ಸಾಗತಿಗಳು ತೀರಾ ಹಾಸ್ಯಾಸ್ಪದವಾಗಿದೆ. ಇದು ಯಾವುದರಿಂದ ಎಂದರೆ ಜನರ ನಾಗರೀಕತೆಯ ನವೀನ ಕಲ್ಪನೆಯ ದೆಸೆಯಿಂದ ಎನ್ನಲು ಅಡ್ಡಿ ಇಲ್ಲ; ಇಂತವಂ ನಮ್ಮ ಹಳೆ ಹಿಂದು ಕ್ರಮ ನಡತೆಗಳನ್ನೆಲ್ಲಾ ಅನಾಗರೀಕತನದ ಅಜ್ಞಾನವೆಂದು ತಿಳಿದ, ಪಾಶ್ಚಾತ್ಯರು ಯಾವುದು ನಾಗರೀಕತನವೆಂದು ಎಣಿಸುತ್ತಾರೋ ಅದನ್ನೇ ಯು ಕ್ತಾಯುಕ್ತ ವಿವೇಚನೆ ಇಲ್ಲದೆ ಅನುಸರಿಸುತ್ತಿರುವರು. ಇಂಥಾ ನಾಗರೀಕತೆಯನ್ನು ಕೆಲ ಪಾಶ್ಚಾತ್ಯರು ತಮ್ಮದೆಂದು ಒಪ್ಪುವುದಕ್ಕೂ ಕೂಡ ನಾಚುವರ. ಸ್ವಲ್ಪ ದಿನಗಳ ಹಿಂದೆ ಒಬ್ಬ ಉತ್ತರ ಹಿಂದೂಸ್ಥಾನದ ಹೆಂಗಸು ನನ್ನ ಹತ್ತಿರ ತನಗೆ ಚಮ್ಮಲ್ಲದೆ ಒರೇ ಕೈಯಿಂದ ಊಟ ಮಾಡುವದಕ್ಕೂ ಟಬ್ ಇಲ್ಲದೆ ಸ್ನಾನಮಾಡುವದಕ್ಕೂ ತಿಳಿಯುವುದಿಲ್ಲವೆಂದು ಹೇಳಿದಳು. ಇದನ್ನು ವಾಚಕರು ಏನೆಂದು ತಿಳಿಯುತ್ತೀರಿ? ಹೀಗೆಯೇ ನಿಮ್ಮ ಮಕ್ಕಳೂ ಇರಬೇಕೇ? ಒಬ್ಬ ಹುಡುಗಿಯ ವಿದ್ಯಾಭ್ಯಾಸವು (ಎಂದರೆ ಏಶ್ವ ವಿದ್ಯಾಲಯದ) ಮುಗಿದು ಗೃಹಸ್ಥೆಯಾದಾಗ್ಯೆ ಒಂದುದಿನ ಮನೆಯ ಅಡಿಗೆಯವನು ಇಲ್ಲವೆಂದು ತಿಳಿಯುತ್ತಾಳೆ. ಅಡಿಗೆ ಸ್ವತಃ ಮಾಡಬೇಕಾಗಿ ಬಂದಿತು. ಶಾಲೆಯಲ್ಲಿ ಅಡಿಗೆ ಮಾಡುವುದನ್ನು ಹೇಳಿಕೊಟ್ಟಿರುವುದಿಲ್ಲವಾದುದರಿಂದ ಅಕೆಗೆ ಸಾಕ ಮಾಡುವುದಕ್ಕೆ ಬಾರದು. ಆಗ ಆಕೆ ಏನು ಮಾಡಬೇಕು? ಫ್ಯಾರಸ್ ಕುಟುಂಬದವರಂತೆ ಹೊಟೇಲಿಗೆ ಊಟಕ್ಕೆ ಹೋಗಬೇಕೋ? ಅಥವಾ ಇನ್ನೊಬ್ಬ ಅಡಿಗೆಯವನು ಬರುವ ತನಕ ಬರೇ ನೀರನ್ನಿನಿಂದ ಜೀವಿಸಬೇಕೇ? ಇಂಥಾ ಕುಟುಂಬದಲ್ಲಿ ಎಂದೆಂದಿಗೂ ಸುಖ ಮತ್ತು ಸಂತೋಷವು ಇರುವುದಿಲ್ಲ. ಯಾವ ತಾಯಿಯೂ ಗೊತ್ತಿದ್ದೂ ತನ್ನ ಮಕ್ಕಳ ಸೌಖ್ಯಕ್ಕೆ ಕೊರತೆ ಬರಬೇಕೆಂದು ಎಣಿಸಾರಳು. ನಾನು ನಿಮ್ಮ ಹತ್ತಿರ ಬೇಡುವುದೇನೆಂದರೆ—ನಿಮ್ಮ ತಪ್ಪು ತಿಳುವಳಿಕೆಯ ದೆಸೆಯಿಂದ ನಿಮ್ಮ ಮಕ್ಕಳ ಭವಿಷ್ಯತ್ತನ್ನು ಹಾಳು ಮಾಡದೇಡಿ ಎಂದು. ನಿಮ್ಮ ಹೆಣ್ಣುಮಕ್ಕಳನ್ನು ಚಿಕ್ಕಂದಿನಿಂದಲೇ ಅವರ ಜೀವನದಲ್ಲಿ ಯಾವುದನ್ನೆಲ್ಲಾ ಎದುರಿಸಲಿಕ್ಕಿರುವರೋ ಅದಕ್ಕೆಲ್ಲಾ ಅವರನ್ನು ತಯಾರು ಮಾಡುವುದಕ್ಕೆ ಪ್ರಾರಂಭ ಮಾಡಿದರೆ ಅಂಥಾ ಮಗಳು ತನ್ನ ಕುಟುಂಬಕ್ಕೇ ಸಂತೋಷವನ್ನು ತರುವುದಲ್ಲದೆ, ಇಡೀ ಜನಾಂಗಕ್ಕೇ ಒಂದು ದೊಡ್ಡ ದ್ರವ್ಯಪ್ರಾಯಳಾಗುವಳೆಂದೂ ಹೇಳಬಹುದು.

ನಿಮ್ಮ ಹೆಣ್ಣು ಮಕ್ಕಳೂ ಆಧುನಿಕ ವಿದ್ಯಾಭ್ಯಾಸವನ್ನು ಮಾಡಲಿ—ಡಿಗ್ರಿಗಳನ್ನೂ ಪಡೆಯಲಿ—ಬೇಡವೆನ್ನುವುದಿಲ್ಲ. ಆದರೆ ಆ ವಿದ್ಯಾಭ್ಯಾಸವೇ ತನ್ನ ಗೃಹ ಕೃತ್ಯವನ್ನು ಇನ್ನಷ್ಟು ಉತ್ತಮ ರೀತಿಯಿಂದ ನಿರ್ವಹಿಸಲು ಸಾಧಕವಾಗಬೇಕೇ ವಿನಹ ಪಾಶ್ಚಾತ್ಯರನ್ನು ಅಣಕಿಸುವುದಕ್ಕೆ ಮಾತ್ರ ಉಪಯೋಗಿಸಲ್ಪಡಬಾರದೆಂಬದೇ ನನ್ನೀ ಲೇಖನದ ಮುಖ್ಯೋದ್ದೇಶವಾಗಿದೆ.

ಪತ್ರವ್ಯವಹಾರ.

[ಬಾತ್ಮಿದಾರರು ಪಡುವ ಅಭಿಪ್ರಾಯಗಳಿಗೆ ಪತ್ರಿಕಾ ಕರ್ತರು ಜವಾಬ್ದಾರರಲ್ಲ. ಸಂ]

ನೀರಿನ ಪರಿ.

ಅಯ್ಯಾ,

ಕೊಡಗಿನಲ್ಲಿ ಭತ್ತವನ್ನು ಅಳಿಯುವಿಕೆ ಸರ್ಕಾರದವರೇ ತಯಾರಿಸಿದನ್ನು ದಕ್ಷಿಣ ಕೊಡಗು ತಾಲೋಕು ಕಚೇರಿಯಲ್ಲು ಇಟ್ಟು 3—4 ತಿಂಗಳಾದಾಗ್ಯೂ ಜಾರಿಗೆ ತಾರದ ವಿಷಯ ತೋಡಿನೀಯವಾಗಿದೆ. ಇನ್ನಾದರೂ ಘನ ಸರ್ಕಾರದವರು ಜಾರಿಗೆ ತರಬೇಕಾಗಿದೆಯಲ್ಲದೆ ಪರೆ ಹೊಡೆಯುವ ಕೋಲು ಪಟ್ಟಿ ಕೋಲಿನಿಂದ ಹೊಡೆಯುವ ಹಾಗೆ ಹುಕುಂ ಕೊಡಿಸುವಂತೆ ಸರ್ಕಾರದವರು ತಿಳುವಳಿಕೆ ಕೊಡಿಸಬೇಕಾಗಿದೆ. ಉರುಟು ಕೋಲು ಮಾಡಿದರೆ ಪರೆ ಹೊಡಿಯುವಾಗ್ಯೆ ನವುಗಳಿಗೆ ನಷ್ಟವಾಗುವುದರಿಂದ ಘನ ಸರ್ಕಾರದವರು ಪಟ್ಟಿ ಕೋಲು ಮಾಡಿಸಿ ಪರೆ ಹೊಡಿಯುವುದಕ್ಕೆ ಅನುಕೂಲ ಮಾಡಿಸಿ ಕೊಡಬೇಕಾಗಿ ಬೇಡುವದಾಗಿದೆ.

ಮುಕ್ಕಾಟಿರ ಕುಟ್ಟಪ್ಪ.

ಕೊಡಗು ಡಿಸ್ಟ್ರಿಕ್ಟ್ ಬೋರ್ಡು.

ಡಿಸ್ಟ್ರಿಕ್ಟ್ ಬೋರ್ಡು ವೈಸ್ ಪ್ರೆಸಿಡೆಂಟರು ಆಗಾಗ್ಯೆ ದೇಶದ ನಾನಾ ಕಡೆಗಳಿಗೆ ಶಾಲೆಗಳನ್ನೂ ಆಸ್ಪತ್ರೆಗಳನ್ನೂ ಸಂದರ್ಶಿಸಲು ಹೋಗುವೆದುಂಟು. ಇವರು ಹೋಗುವಲ್ಲಿ ಆಯಾಯ ಸ್ಥಳೀಕ ರೆವಿನ್ಯು ಅಧಿಕಾರಿಗಳೂ ನಾಡನ ಡಿಸ್ಟ್ರಿಕ್ಟ್ ಬೋರ್ಡು ಮೆಂಬರುಗಳೂ ಶಾಲಾ ಉಪಾಧ್ಯಾಯರೂ ಅವರಿಗೆ ಬೇಕುಬೇಕಾದ ಸ್ಥಿತಿಗತಿಗಳ ಅನುಭವನ್ನು ಕೊಡುತ್ತಿರುವದು ವಾಡಿಕೆಯಾಗಿದೆ. ಅಲ್ಲದೆ ಈ ಬಾಬಿನಲ್ಲು ಸ್ಥಳೀಯ ರೈತರೂ ಸಹ ತುಂಬಾ ಸಹಕರಿಸಲು ಕುತೂಹಲಉಳ್ಳವರಾಗಿದ್ದಾರೆ. ಹೀಗಿರುವಾಗ್ಯೆ ಇವರು ಡಿಸ್ಟ್ರಿಕ್ಟ್ ಬೋರ್ಡಿನ ಕ್ವಾರ್ಟರ್ಸ್‌ಗಳನ್ನು ಸಹ ಜೊತೆಯಲ್ಲಿ ಕರೆದುಕೊಂಡು ಸವಾರಿ ಹೊರಡುವದರ ಪ್ರಯೋಜನವೇನೆಂಬದು ಮೂತ್ರ ತಿಳಿಯುವರೆ. ಈ ಕ್ವಾರ್ಟರ್ಸ್‌ಗಳಿಗೆ ಗ್ರಾಮಾಂತರಗಳ ಯಾವ ಹೆಚ್ಚಿನ ಅನುಭವ ಇದೆ ಎಂಬದು ಗೊತ್ತಾಗುವದಿಲ್ಲ. ಇದು ಅಲ್ಲದೆ ಈ ಕ್ವಾರ್ಟರ್ಸ್‌ಗಳ ಬತ್ಯವೂ ಬೋರ್ಡಿನ ಹಣದಿಂದ ಕೊಡುತ್ತಿರುವರೋ—ಈ ಮಧ್ಯೆ ಬೋರ್ಡಿನ ಕ್ವಾರ್ಟರ್ಸ್‌ಗಳೂ ಒಂದು ಸ್ವಂತ ಕಾರನ್ನು ಇಟ್ಟುಕೊಂಡಿರುವರೋ—ನಮ್ಮ ವೈಸ್ ಪ್ರೆಸಿಡೆಂಟರು ಇದೇ ಕಾರಿನಲ್ಲಿ ಸಾದಾರಣ ಪ್ರಯಾಣ ಮಾಡುತ್ತಿರುವದೋ ಬೋರ್ಡಿನ ಆಫೀಸಿನಲ್ಲಿ ಕೆಲಸವು ಇವರ ಗೈರಾಜರಲ್ಲಿ ಸರಿಯಾಗಿ ನಡೆಯಬಹುದೋ, ಆಫೀಸಿನ ಕೆಲಸವು ಮಡಿಕೇರಿಯ ಬೇರೆ ಆಫೀಸಿಗಳಿಗಿಂತ ಬಹಳ ಕಮ್ಮಿಯಾಗಿರುವದು ನಿಜವೋ ಹಾಗಾದರೆ ಪ್ರೆಸಿಡೆಂಟರಾದ ಕಮಿಶನರೂ ಬೋರ್ಡು ಮೆಂಬರುಗಳೂ ಇದನ್ನು ಗಣನೆಗೆ ತಂದು ಈಗ ಇರುವ ಕ್ವಾರ್ಟರ್ಸ ಸಂಖ್ಯೆಯನ್ನು ಕಮ್ಮಿ ಮಾಡಬೇಕಲ್ಲದೆ ಆ ನಾವಶ್ಯವಾಗಿ ಕ್ವಾರ್ಟರ್ಸ್‌ಗಳನ್ನು ನಮ್ಮ ವೈಸ್ ಪ್ರೆಸಿಡೆಂಟರು ಸವಾರಿಗೆ ಕೂರಿಸಿಕೊಂಡು ದೇಶ ಸಂಚಾರ ಮಾಡದಂತೆ ಮಾಡಿಯಾರಾಗಿ ನಂಬುತ್ತೇವೆ.

ದೈತ.

ಅಮ್ಮತ್ತಿಯ ಪತ್ರ.

ಅಯ್ಯಾ,

ಅಮ್ಮತ್ತಿ ಟೌನಿನಲ್ಲಿ ಕಳೆದ 6 ತಿಂಗಳುಗಳಿಂದ ಬರಿ ಎರಡು ದೀಪಗಳು ಮಾತ್ರ ಉರಿಯುತ್ತಿದೆ. ಬಾಕಿ ಎರಡು ದೀಪಗಳು ಆ ಆಗಾಗಾಯಿತ್ತಿನಿಂದಲೇ ರಿಪೇರಿಗೆ ಬಂದಿದ್ದು ಇನ್ನು ರಿಪೇರಿಯೇ ಆಗಿಲ್ಲವಂತೆ. ದೀಪವಿಲ್ಲದ್ದರಿಂದ ಟೌನಿನವರಿಗೆ ತುಂಬಾ ಅನಾನೂಕೂಲವಾಗಿದೆ ಅಧಿಕಾರಿಗಳು ಈ ಕಡೆ ನಿಗವಿಡುವರೇ—

ಅಮ್ಮತ್ತಿ ಟೌನಿಗಾಗಿ ಹಾದುಹೋಗುವ ರಸ್ತೆಗೆ ದೂಳು ಮಣ್ಣು ಹಾಕಬಾವದಾಗಿ ಕಳೆದ 2 ವರ್ಷಗಳಿಂದಲೂ ಜನ ಬಂದು ಆಫೀಸುಗಳಿಗೆ ಟೌನಿನವರು ಅರ್ಜಿ ಬರಕೊಂಡರೂ ಬಡ ಜನರ ಹವಾಲಿಯನ್ನು ಗಮನಕ್ಕೆ ತಾರದೆ ಮೊಣ್ಣು ಈ ವರ್ಷವೂ ಹಾಕಿಸಿರುವದು ತುಂಬಾ ವ್ಯಸನಕರ. ಇನ್ನು ಮುಂದಕ್ಕಾದರೂ ಮಣ್ಣು ಹಾಕಿಸದಂತೆ ಅಧಿಕಾರಿಗಳು ಕೆಳನೌಕರರಿಗೆ ಅಪ್ಪಣೆ ಕೊಡುವರಾಗಿ ಕೋರುತ್ತೇವೆ.

ರಸ್ತೆಗೆ ದೂಳು ಮಣ್ಣು ಹಾಕುವಾಗ ರಸ್ತೆ ಕರೆಗಳಲ್ಲಿ ಬರೆಯಿಲ್ಲದಿದ್ದರೆ ರಸ್ತೆಯ ಬದಿಗಳನ್ನೇ ಕಡಿದು ತೆಗೆದು ಮಣ್ಣು ಹಾಕಲು ಸುರುಮಾಡಿ ಸುಮಾರು 2—3 ವರ್ಷಗಳಾಯಿತು. ಅಧಿಕಾರಿಗಳು ಇದನ್ನು ನಿಲ್ಲಿಸದೆ ಹೋದರೆ ರಸ್ತೆ ಬದಿಗಳೆಲ್ಲಾ ಒಂದೆರಡು ವರ್ಷಗಳಲ್ಲಿ ಕುಸಿದು ಬೀಳುವದು ಕಂಡಿತ.

ಅಮ್ಮತ್ತಿ ನಾಡಿನ ಕೆಲವು ಗ್ರಾಮ ರಸ್ತೆಗಳ ರಿಪೇರಿ ಕೆಲಸಗಳು ತೀರಿ ಸುಮಾರು ಒಂದೂವರೆ ತಿಂಗಳು ಆದರೂ ಕೆಲವು ರಸ್ತೆಗಳಿಗೆ ಆ ಬಗ್ಗೆ ಒಂದು ಕಾಸೂ ಸರಕಾರದಿಂದ ಪಾವತಿಯಾಗಿಲ್ಲ. ಈ ಬಗ್ಗೆ ಜವಾಬುದಿ ಆಫೀಸರಿಗೆ ಪುಕಾರು ಅನೇಕರು ಹೇಳಿಕೊಂಡರೂ ಜವಾಬುದಿ ಕೆಳೆದು ತಿಂಗಳು ಒಂದು ಆಗುತ್ತಾ ಬಂದರೂ ಇನ್ನೂ ಹಣವೊರೆತಿಲ್ಲ. ಹೊಟ್ಟೆಗಿಲ್ಲದ ಬಡ ಜನರು ಗೈದ ಹಣವನ್ನು ಕೊಡಲು ಅಧಿಕಾರಿಗಳು ಈ ರೀತಿ ಉದಾಸೀನರಾಪರೆ ಯಾರಲ್ಲಿ ತಾನೆ ದೂರುವದು.

ಐ. ಮೊದಪ್ಪ.

ಕೊಡಗು ಮದ್ಯಾಸಿಗೆ ಸೇರಬೇಕೇ?

ನನಗೆ ಮದ್ಯಾಸಿನ 35 ಸೆಂಟಿನ ಜಾಗದ ಪ್ರಯೋಜನ ಫಾರೆಸ್ಟಿನವರೆ ಘೋರ ಕೃತ್ಯ ಕೇಳಿಯೊದರೂ ಮದ್ಯಾಸ್ ಬೇಡವೆಂತ ಹೇಳಿದರೆ ಅದು ಹೆಚ್ಚಾಗಲಿಕ್ಕಿಲ್ಲ ಅದೇನೆಂದರೆ:—

ನಾನು ಉತ್ತರ ಕೊಡಗು ತಾಲೋಕು ಮಡಿಕೇರಿ ನಾಡು ಮೊಣ್ಣಂಗೇರಿ ಗ್ರಾಮದ ಜೇಡ್ಲದಲ್ಲಿರುವ ಅಂಗ್ರಿ ನರಸಿಂಹ್ಮ ಭಟ್ಟನಾದ ನಾನು ಕೊಡಗು ಸರ್ಕಾರದಿಂದ ಸುಮಾರು 35 ಎಕರು ಜಾಗವನ್ನು ಕೃಷಿಗಾಗಿ ದರಖಾಸ್ತಿಗೆ ಪಡೆದು 16ನೇ ಇಸವಿಯಿಂದ ಕೃಷಿಗೆ ಪ್ರಾರಂಭಿಸಿ ಹೆಚ್ಚು ಕಡಿಮೆ 4, 5 ಸಾವಿರ ರೂ. ಖರ್ಚಿನಿಂದ ಅಡಿಕೆ, ತೆಂಗು, ಬಾಳೆ ವಗೈರೆ ಕೃಷಿ ಮಾಡುವಾಗ್ಯೆ ತಿಳಿಲ್ಲದೆ ಕನ್ನಡ ಜಿಲ್ಲೆಯ ಫಾರೆಸ್ಟಿನಲ್ಲಿ 35 ಸೆಂಟು ಅಡಿಕೆ ತೋಟ ಸೇರಿತ್ತು. ಈ ಸಂಗತಿ ನನಗೂ ಸರ್ಕಾರಕ್ಕೆ ಗೊತ್ತಿಲ್ಲದೆ ಕಳೆದ ವರ್ಷ ತಿಳಿದು ಬೌಂಡ್ರಿ ಹೆಕ್ ಮಾಡುತ್ತಾ ಬರುವಾಗ್ಯೆ ಕಡವುಕಲ್ಲು ರಬ್ಬರ್ ತೋಟದಲ್ಲಿ ಕೆಲವು ಜಾಗ 35 ಸೆಂಟು ನನ್ನಲ್ಲಿ ಜಾಗ ಹೆಚ್ಚಾಗಿ ಇದೆಯೆಂಗಿ ತಿಳಿದು ಬಂತು. ಆ ಸಮಯ ಫಾರೆಸ್ಟ್ ದೊರೆಗಳವರು ತಪ್ಪಿಲ್ಲ ಗಡಿಯಲ್ಲಿ ಹೀಗೆ ಎಲ್ಲೆಲ್ಲಿಯೂ ಆಗುತ್ತಿದೆ. ರಬ್ಬರ್ ತೋಟದಲ್ಲು ಕೂಡ ಹೀಗಾಗಿದೆ. ಇದಕ್ಕೆ ನೀನು 150 ರೂ. ಕೊಟ್ಟಲ್ಲಿ ನಿನಗೇನೇ ಸದರಿ ಜಾಗವನ್ನು 10 ರೂ. ಗೆ ಗೇಣಿಗೆ ಕೊಡಬಹುದೆಂತ ನನಗೆ ಬೋಧಿಸಿ, ವಂಚಿಸಿ ನನ್ನಿಂದ 150 ರೂ. ಪಡೆದು, ನಂತರ ಗೇಣಿಗೆ ಕೊಡಲಾಗುವುದಿಲ್ಲವೆಂದು ಹುಕುಂ ಮೂಡಿ 16 ವರ್ಷವಾಗಿದ್ದ 10I ಅಡಿಕೆ ಮರಗಳನ್ನೂ 6 ತೆಂಗಿನ ಮರಗಳನ್ನೂ ಕಾಸುರುಗೋಡು ರೇಂಜರು ಪೊಲೀಸ್ ಸಹಾಯದೊಡನೆ ಸಿಬ್ಬಂದಿಗಳ ಸಮೇತ ಬಂದು ಮೇಲೆ ಹೇಳಿದ ಮರಗಳನ್ನು 11—12—32ರಲ್ಲಿ ಕಡಿದು ನೆಲಕ್ಕುರುಳಿಸಿದರು. ಇದನ್ನು ನೋಡಿದವರು ಯಾ ಕೇಳಿದರೆ ಸಹ ಎಂಥಾ ಕಲ್ಲೆದೆಯೊದರೂ ಕರಗದೆ ಇರಲಾರದು. ಆದ್ದರಿಂದ ನಾನು ನನ್ನ ಕೊಡಗು ಸಹೋದರರಿಗೆ ಹೇಳಿ ಬೇಡಿಕೊಳ್ಳುವದೇನೆಂದರೆ—ಇಂಥಾ ಕ್ರೂರಕೃತ್ಯವನ್ನು ಗೈವ ಮದ್ಯಾಸ್ ಬೇಡವಾ ಬೇಡ. ಇಲ್ಲಿ ಒಬ್ಬನೇ ಚೀಫ್ ಕಮಿಶನರ್ ಎಂಬ ಹೇಳಿಕೆ ನಿಮಗೆ. ಮದ್ಯಾಸಿನಲ್ಲಿ ಹಾಗಲ್ಲ. "ಹಲವು ಸಮುಗಾರರು ಸೇರಿ ಚರ್ಮದ ಹದ ಕೆಡಿಸಿಬಿಟ್ಟರೆಂಬಂತೆ." ಇಂಥಾ ಘೋರ ಶಾಸನ ಕೊಡಗು ರಾಜರ ಕಾಲದಲ್ಲಿ ಸಹ ಮನುಷ್ಯನ ಮೇಲೆ ಹೊರತು ಫಲವೃಕ್ಷಗಳ ಮೇಲಲ್ಲ. ಈ ನ್ಯಾಯಾಧೀಶರು ಕಲ್ಲು ಮರಕ್ಕೆ ಸಮ.

ಅಂಗ್ರಿ ನರಸಿಂಹ್ಮಭಟ್ಟ.

ಡಿಸ್ಟ್ರಿಕ್ಟ್ ಬೋರ್ಡು ನಾನ್ ಆಫಿಷಿಯಲ್ ಪ್ರೆಸಿಡೆಂಟ್.

ಅಯ್ಯಾ,

ಕೊಡಗಿನ ಡಿಸ್ಟ್ರಿಕ್ಟ್ ಬೋರ್ಡಿಗೆ ನಾನ್ ಆಫಿಷಿಯಲ್ ಪ್ರೆಸಿಡೆಂಟ್ ತನವನ್ನು ಕೊಟ್ಟದ್ದು ದೇಶದವರಿಗೆ ತುಂಬಾ ಸಂತೋಷವೇ ಸರಿ. ಆದರೆ ಅವರನ್ನು ನೇಮಿಸುವ ಹಕ್ಕು, ಚೀಫ್ ಕಮಿಶನರ್ ಸಾಹೇಬರಲ್ಲಿಟ್ಟು, ಚೀಫ್ ಕಮಿಶನರ್ ಸಾಹೇಬರು ಇಷ್ಟಪಟ್ಟಲ್ಲು ಬೋರ್ಡಿನವರೇ ಚುನಾಯಿಸುವ ಅಧಿಕಾರ ಕೊಡಲಾದೀತೆಂಬ ಶರತ್ತನ್ನು ಇಟ್ಟುಕೊಂಡದ್ದು ತುಂಬಾ ಅತೃಪ್ತಿಕರವಾಗಿದೆಯೆಂತ ಹೇಳಬೇಕಾಗಿಲ್ಲ. ಚುನಾಯಿತ ಮೆಂಬರರ ಪೈಕಿ ಒಬ್ಬ ಯೋಗ್ಯ ಮೆಂಬರನನ್ನು ಚುನಾಯಿಸಿ ಬೋರ್ಡಿನ ಅಧ್ಯಕ್ಷರನ್ನಾಗಿ ಮಾಡುವ ಅಧಿಕಾರವು ಬೋರ್ಡಿನವರಿಗೆ ಇರಬೇಕಲ್ಲದೆ, ಚೀಫ್ ಕಮಿಶನರ್ ಸಾಹೇಬರು ಇಟ್ಟುಕೊಂಡರೆ ಆ ಉದ್ಯೋಗಕ್ಕೆ ಯೋಗ್ಯನನ್ನಾರಿಸಿ, ನೇಮಿಸಲು ಅವರಿಗೆ ಸಾಕಷ್ಟು ಅವಕಾಶವಿಲ್ಲ. ಒಬ್ಬ ಮೆಬರು ಚೀಫ್ ಕಮಿಶನರವರ ಪ್ರೀತಿಗೆ ಪಾತ್ರರಾದ ಮಾತ್ರಕ್ಕೆ, ಅಂಥಾವರು ಬೋರ್ಡಿನವರ ಮತ್ತು ದೇಶದವರ ಪ್ರೀತಿಗೂ ಪಾತ್ರರು ಎಂತ ಹೇಳುವುದು ಅಸಾಧ್ಯ ಕಳೆದ ವಾರ ಈ ಪತ್ರಿಕೆಯಲ್ಲಿ ಮೆ. ಪಾಂಡಂಡ ಚಾಂಗಪ್ಪನವರನ್ನು ಹೊಗಳಿ ಬರೆದ "ದೇಶಹಿತೈಷಿ"ಗೆ ಇದು ತೋಚಲಿಲ್ಲವಾಗಿ ಕಾಣುತ್ತೆ. "ದೇಶಹಿತೈಷಿ"ಗೆ ಬೇಕಾದ ಒಬ್ಬರನ್ನು ನಾನ್ ಆಫೀಶಿಯಲ್ ಪ್ರೆಸಿಡೆಂಟರನ್ನಾಗಿ ಮಾಡಿದಕ್ಕಾಗಿ ಅವರಿಗೂ ಬಹುತಃ ಉದ್ಯೋಗಸ್ಥರಲ್ಲಿ ಕೆಲವರಿಗೂ ತೃಪ್ತಿಯಾದ ಮಾತ್ರಕ್ಕೆ ಇಡೀ ದೇಶಕ್ಕೇ ತೃಪ್ತಿಯಾಗಿದೆಯೆಂತ ಹೇಳಲು "ದೇಶಹಿತೈಷಿ"ಗೆ ಆಧಾರವೆಲ್ಲಿ? ಮೇ. ಪಾಂಡಂಡ ಚಾಂಗಪ್ಪನವರು ಆರು ವರ್ಷಗಳ ವರೆಗೆ ವೈಸ್ ಪ್ರೆಸಿಡೆಂಟರಾಗಿದ್ದದ್ದೇನೋ ಸಹಜ. ಆದರೆ ಅವರು ಅವರ ಸ್ವಂತ ಬುದ್ಧಿವಂತಿಕೆಯಿಂದ ಈ ಆರು ವರ್ಷಗಳಲ್ಲಿ ವಿಶೇಷ ತಾವು ಕೆಲಸಗಳನ್ನು ಮಾಡಿದ್ದೇನು ದೇಶದವರ ತಿಳುವಳಿಕೆಗೆ ಬಾರದಿರುವುದಿಲ್ಲ, "ದೇಶಹಿತೈಷಿ"ಯು ಹೇಳುವ ಉದಾಹರಣೆಯನ್ನೇ ಎತ್ತಿ ಟೀಕಿಸುವುದಾದರೂ, ವಿದ್ಯಾಕಮಿಟಿಯವರ ರಿಪೋರ್ಟ್ ಪ್ರಕಾರ ಗ್ರಾಮದವರು ಅರ್ಧಾಂಶ ಚಾಂದಾ ಕೊಟ್ಟರೆ ಮಾತ್ರ ಬೋರ್ಡಿನವರು ಅರ್ಧಾಂಶ ದ್ರವ್ಯ ಕೊಟ್ಟು ಒಂದು ಗ್ರಾಮದಲ್ಲಿ ಶಾಲೆಯನ್ನು ಸ್ಥಾಪಿಸಲಾದೀತು ಎಂತ ಮಾಡಿದ ತೀರ್ಮಾನವನ್ನು ಮೇ. ಚಾಂಗಪ್ಪನವರು ಮುಖ್ಯ ಭಾಗಿಗಳಾಗಿದ್ದಾರೆ. ಇದು ಎಷ್ಟರ ಮಟ್ಟಿಗೆ ದೇಶದವರಿಗೆ ಸಮಾಧಾನವಾದದ್ದು ಎಂತ ವಾಚಕರೇ ಊಹಿಸಿ. ಹೇಗೂ ಮೇ. ಚಾಂಗಪ್ಪನವರು ಮಾಡಿದ ಕೆಲಸದಿಂದಲೇ, ದೇಶದವರು ಹೆಚ್ಚಿನ ಜವಾಬ್ದಾರಿಗೆ ಯೋಗ್ಯರೆಂತ, ಸ್ಥಳೀಯ ಸರಕಾರದವರು ನಾನ್ ಆಫೀಶಿಯಲ್ ಪ್ರೆಸಿಡೆಂಟ್‌ತನವನ್ನು ದಯಪಾಲಿಸಿದ್ದೆಂತ ಹೇಳುವುದು ತಪ್ಪು ಅಭಿಪ್ರಾಯ. ದೇಶದವರೆಲ್ಲರೂ ಸಂಪೂರ್ಣ ಜವಾಬ್ದಾರಿಯ ಸರಕಾರವನ್ನು ಸ್ಥಾಪಿಸಬೇಕೆಂಬ ಹಟವಾದ ಛಲವಳ ನಿಶ್ಚಯತ್ವ ಇರುವದರಿಂದ ಸರಕಾರದವರಿಗೆ ಆ ಬಾಬಿನಲ್ಲಿ ಜನರನ್ನು ಸಮಾಧಾನಪಡಿಸಲು ಸಾಧ್ಯವಿಲ್ಲವೆಂತ ಹೇಳಿ, ಡಿಸ್ಟ್ರಿಕ್ಟ್ ಬೋರ್ಡನ್ನಾದರೂ ಕೆಲವು ಮಟ್ಟಿಗೆ ಸುಧಾರಣೆ (reform) ಮಾಡಿದರೆ ದೇಶದವರಿಗೆ ತೃಪ್ತಿಯಾಯೀತೆಂಬ ಭಾವನೆಯಿಂದ ಇದೊಂದು ಮಾರ್ಗಾಟು ಕೊಟ್ಟಿದ್ದಾರೆಂತ ಹೇಳಿದರೆ ತಪ್ಪಾಗಲಾರದು. ಹೇಗೂ ನಮ್ಮ ಸರಕಾರದವರು ಒಂದು ಕೈಯಲ್ಲಿ ಕೊಟ್ಟದ್ದನ್ನು ಮತ್ತೊಂದು ಕೈಯಲ್ಲಿ ಹಿಂದಕ್ಕೆ ತೆಗೆದುಕೊಳ್ಳದೆ, ಈ ಮೊದಲು ಡಿಸ್ಟ್ರಿಕ್ಟ್ ಬೋರ್ಡಿನವರು ತರಾವು ಮಾಡಲಿಕ, ತೀರ್ಮಾನಿಸಿದಂತೆ ಡಿಸ್ಟ್ರಿಕ್ಟ್ ಬೋರ್ಡಿನ ಚುನಾಯಿತ ಮೆಂಬರ ಪೈಕಿ ಒಬ್ಬರನ್ನು, ಆರಿಸುವ ಅಧಿಕಾರವನ್ನು ಬೋರ್ಡಿನವರಿಗೆ ಚೀಫ್ ಕಮಿಶನರವರು ಶರತ್ತುಗಳ

ಯು೦. ಗಣಪಯ್ಯ ಎಂಡ್ ಸನ್ಸ್, ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು, ಇವರ

ಅನುಭವಸಿದ್ಧ ಔಷಧಗಳು.

೧. ಧಾತುಪುಷ್ಟಿ ಲೇಹ—ಬಾಲ್ಯತನದ ದುರಭ್ಯಾಸಗಳ ಪರಿಣಾಮದಿಂದ ಧಾತು ನಷ್ಟವಾಗುವಿಕೆ, ಧಾತುವು ಮೂತ್ರದೊಡನೆಹೊರ ಹೋಗುವಿಕೆ, ನರಗಳು ದುರ್ಬಲವಾಗಿ ಸಂಭೋಗಶಕ್ತಿಯು ಕುಂದಿರುವಿಕೆ, ಸ್ವಪ್ನದಲ್ಲಿ ಧಾತುವು ನಷ್ಟವಾಗುವಿಕೆ, ಜ್ಞಾಪಕಶಕ್ತಿಯು ದಿನೇ ದಿನೇ ಕ್ಷಯಿಸುವಿಕೆ, ಮೇಹ, ಪಿತ್ತದ ಬಾಧೆ, ರಕ್ತಪಿತ್ತ, ಒಳಜ್ವರ, ಮಲಬದ್ಧತೆ, ಕೈಕಾಲು ಒಚ್ಚುವುದು ಮೊದಲಾದವುಗಳು ಪೂರ್ಣ ಗುಣವಾಗಿ ಕಳೆದುಹೋದ ಶಕ್ತಿಯು ಪುನಃ ತುಂಬಿಕೊಳ್ಳುವುದು. ಡಬ್ಬಿ 1ಕ್ಕೆ ರೂ. 2–8–0. 3ಕ್ಕೆ ರೂ. 7–0–0.

೨. ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಮುಟ್ಟುದೋಷಗಳು, ಋತುಸ್ರಾವವು ಹೆಚ್ಚು ಕಮ್ಮಿಯಾಗುವುದು, ಹೊಟ್ಟೆನೋವು, ಸೊಂಟನೋವು, ಸುತಾ ಸಹೀನತೆ, ಮೂರ್ಛೆ, ಮಲಬದ್ಧತೆ, ರಕ್ತಹೀನತೆ, ಕೈಕಾಲು ಸೆಳೆತ ಮತ್ತು ಗರ್ಭಾಶಯದ ಎಲ್ಲಾ ರೋಗಗಳನ್ನು ಗುಣಪಡಿಸುವದು. 1 ಬಾಟ್ಲಿ ಔಷಧಕ್ಕೂ, 1 ಡಬ್ಬಿ ಮಾತ್ರೆಗೂ ರೂ. 2—4—0; 2ಕ್ಕೆ ರೂ. 4—4—0.

೩. ಮೇಹಕುಠಾರ—ಇದು ಮೂತ್ರಸ್ಥಾನದಿಂದ ಕೆಂಪು, ಬಿಳಿದು, ಹಳದಿಯಂತೆ ಹೋಗತಕ್ಕ ಕೀವನ್ನೂ, ವ್ರಣವನ್ನೂ, ಉರಿಯನ್ನೂ ಗುಣಪಡಿಸುತ್ತದೆ. ಡಬ್ಬಿ 1ಕ್ಕೆ ರೂ. 2—8—0; 3ಕ್ಕೆ ರೂ. 7—0—0.

೪. ಬಾಲಾಗ್ರಹ ಗುಟಿಕೆ—ಬಾಲಾಗ್ರಹ, ಕಫ, ಕೆಮ್ಮು, ಉಬ್ಬಸ, ಎದೆಯಲ್ಲಿ ಗುರು ಗುರು ಶಬ್ದ, ಮಲಬದ್ಧತೆ ಇವುಗಳ ಮೇಲೆ ದಿವ್ಯ ಔಷಧ. ಬಾಟ್ಲಿ ಒಂದಕ್ಕೆ ರೂ. 0—10—0. 3ಕ್ಕೆ ರೂ. 1—12—0. (52—15)

(FREE INSURANCE)

ಉಚಿತ ವಿಮಾ.

ಮ್ಯೂಚುವಲ್ ಬೆನಿಫಿಟ್ ಸ್ಕೀಂ ಎಂಬ
ಅನ್ಯೋನ್ಯ ಸಹಾಯ ಪದ್ಧತಿ.

(Mutual Benefit Scheme.)

ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ,
ಲಿಮಿಟೆಡ್, ಹೆಡ್ ಆಫೀಸು—ಮದ್ರಾಸ್.

ಲೈಫ್ ಇನ್‌ಷ್ಯೂರೆನ್ಸಿನ ಕಂಪೆನಿಗಳ ಕಾನೂನಿಗೆ ಅಧೀನವಾಗಿದೆ. ಸುಕಾರದಲ್ಲಿಡಬೇಕಾದ ಠೇವಣಾತಿ ಇಡಲಾಗಿದೆ.

ಈ ಮೇಲ್ಕಂಡ ಕಂಪೆನಿಯು ಅನ್ಯೋನ್ಯ ಸಹಾಯಕ್ಕಾಗಿ ಕಳೆದ ವರ್ಷ ಅಂದರೆ 1931ನೇ ಫೆಬ್ರವರಿಯಲ್ಲಿ ಮದ್ರಾಸಿನಲ್ಲು ಸ್ಥಾಪಿತವಾಗಿ ಈ ವರೆಗೆ 26000 ಸಾವಿರಕ್ಕೂ ಹೆಚ್ಚಾಗಿ ಪಾಲಿಸಿಗಳನ್ನು ಪಡೆದಿರುತ್ತೆ. ಈ ಮೇಲ್ಕಂಡ ಕಂಪೆನಿಗೆ ಐಶ್ವರ್ಯವಂತರೂ, ಬಡವರೂ, ವಿತಸಂಪಾದನೆಯುವರೂ, ಜಾತಿ ಮತಗಳ ಬೇಧವಿಲ್ಲದೆ ಜಾತಿವಾರೂ, ಕೋಮುವಾರೂ, ಹೆಂಗಸರೂ, ಗಂಡಸರೂ ಹೆಚ್ಚು ರುಸುಂ ಕೊಡದೆಯೇ ಉಚಿತ ಜೀವೆ ವಿಮೆ ಮಾಡಿಕೊಳ್ಳಬಹುದು. 18 ವರ್ಷಕ್ಕೆ ಮೇಲ್ಪಟ್ಟು 60 ವರ್ಷದೊಳಗಿರುವವರು ಈ ಕಂಪೆನಿಗೆ ಸೇರಬಹುದು. ಈ ಕಂಪೆನಿಗೆ ಸೇರಲು ಇಚ್ಛಿಸುವವರು ಸುರುವಿನಲ್ಲಿ ರೂ. 5—8—0ನ್ನು ಮೊತ್ತ ಕಟ್ಟತಕ್ಕದ್ದು. ಅನಂತರ ತಿಂಗಳು ಒಂದರ 1 ರೂ. ಸ್ವಲ್ಪದರಲ್ಲು ದೊಡ್ಡ ಲಾಭ ದೊರೆಯುತ್ತೆ. ಆದ್ದರಿಂದ ಇಂಥಾ ಸುಸಮಯವನ್ನು ಕಳೆದುಕೊಳ್ಳಬೇಡಿ. ಈ ದಿನವೇ ಪಾಲಿಸಿಗಳನ್ನು ಹೊಂದಲು ಅರ್ಹರಾಗಿರಿ. ಇದರ ಫಲವನ್ನು ಹೊಂದಲು ಭಾಗಿಗಳಾಗಿರಿ.

ಹೆಚ್ಚಿನ ಮಾಹಿತಿಗಳಿಗೆ ಈ ಕೆಳಗಿನವರಿಗೆ ಬರೆದು ತಿಳಿದುಕೊಳ್ಳಬಹುದು. ಅಲ್ಲದೆ ಇವರು ಕೊಡಗಿನ ಎಲ್ಲಾ ಕಡೆಗಳಲ್ಲಿಯೂ ತಿರುಗುತ್ತಲಿರುತ್ತಾರೆ.

ಯನ್. ಬಿ. ಕರುಂಬಯ್ಯ,
ಏಜೆಂಟ್,
ಜೈ ಭಾರತ ಇನ್‌ಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್,
12—11 ನಾಪೋಕ್ಲು, (ಕೊಡಗು.

೪೦ ವರ್ಷಗಳಿಂದ ಅನುಭವಪಟ್ಟು ಪ್ರಖ್ಯಾತಿ ಹೊಂದಿದ

ಕರ್ಕ ಕಂಪನಿ ೧೨೨೭

ಜ್ವರದ ಗುಳಿಗೆಗಳು.

ಚಳಿಜ್ವರ, ಚಾತುರ್ಥಿ ಜ್ವರ, ದಿನಬಿಟ್ಟು ಒರುವ ಜ್ವರ, ಮಲೇರಿಯಾ ಜ್ವರ ಇತ್ಯಾದಿ ಜ್ವರಗಳ ಮೇಲೆ ರಾಮ ಬಾಣದಂತೆ ಇವೆ. ಬಾಟ್ಲಿಗೆ ರೂ. ೧. ಟಿ. ಖ. ೭ ಆಣೆ. ಜರೂರು ತರಿಸಿಕೊಳ್ಳಿ.

ಗಣೇಶ ರಾಮಚಂದ್ರ ಕರ್ಕ,
(52—21) ಮತ್ತು ಕಂಪೆನಿ,
ಗಿರಗಾಂವ, ಮುಂಬಯಿ,

ಇಂಡಿಯಾ ಎಕ್ಸ್‌ಟೇಬಲ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪಿಸಲ್ಪಟ್ಟದ್ದು 1908.)

ಕಳೆದ ವರ್ಷದ ಫಲಿತಾಂಶಗಳು.

ಹಿಂದಿನ ವರ್ಷದ ಕೆಲಸಕ್ಕಿಂತ 64% ಹೆಚ್ಚು.

ಕಳೆದ ವರ್ಷ ಸಂಭವಿಸಿದ ಹಕ್ಕು ಬಾಧ್ಯಸ್ಥರಲ್ಲಿ ಶೇಕಡ 96·6 ಜನರಿಗೆ ಹಣ ಅದೇ ವರ್ಷ ಕೊಡಲಾಗಿದೆ.

ಖರ್ಚಿನ ದಾಮು ಶಾಯಿ 31% ಮಾತ್ರ.

ಇಂಡಿಯಾ ಎಕ್ಸ್‌ಟೇಬಲ್ ಇನ್ಶ್ಯೂರೆನ್ಸ್ ಕಂಪೆನಿಯು ಬುಡದಿಂದ ತಲೆಯ ವರೆಗೂ ಇಂಡಿಯನೇ.

ವಜನದಾರರಾದ ಏಜೆಂಟರುಗಳು ಬೇಕಾಗಿದ್ದಾರೆ.

ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಕೆ. ಇ. ಚಾಕೊ,
ಬ್ರಾಂಚ್ ಸೆಕ್ರೆಟರಿ,
159 ಶ್ರೀ ನರಸಿಂಹರಾಜ ರೋಡ್,
ಬೆಂಗಳೂರು ಸಿಟಿ.

ಅಥವಾ

(1) ಮಿಸ್ ಸಿ. ಯಂ. ಪೂವಯ್ಯ,
ಲೇಡಿ ಆರ್ಗನೈಜರ್,
'ಪೂವಯ್ಯ ವಿಲ್ಲಾ,'
(12—6) ಮಡಿಕೇರಿ.

(2) ಯಂ. ಸಿ. ಅಪ್ಪಚ್ಚು,
ರಿಟಯರ್ಡ್ ಪಾರುಪತ್ಯಗಾರ್,
ಹಿಲ್ ರೋಡ್,
ಮಡಿಕೇರಿ.

ಎಂಪಯರ್ ಆಫ್ ಇಂಡಿಯಾ ಲೈಫ್ ಎಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.

(ಸ್ಥಾಪನೆಯಾದದ್ದು 1897.)

1934ನೇ ಇಸವಿ ಮಾರ್ಚ್ 1ನೇ ತಾರೀಕಿನೊಳಗೆ ಹಕ್ಕಾಗುವ ಪೋಲಿಸಿಗಳ ಮೇಲೆ ಇಂಟರಿಮ್ ಬೋನಸ್ ಸುಗಳು ವರ್ಷಕ್ಕೆ 1000ಕ್ಕೆ ರೂ. 16ರಂತೆ ಹೋಲ್ ಲೈಫ್ ಎಷ್ಯೂರೆನ್ಸಿನ ಮೇಲೆಯೂ
ಮತ್ತು
1000ಕ್ಕೆ ರೂ. 14ರಂತೆ ಎಂಡೋಮೆಂಟ್ ಎಷ್ಯೂರೆನ್ಸಿನ ಮೇಲೆಯೂ ಏರಿಸಲ್ಪಟ್ಟಿವೆ.

ಹೆಡ್ ಆಫೀಸು:—
ಎಂಪೈರ್ ಆಫ್ ಇಂಡಿಯಾ
ಲೈಫ್ ಬಿಲ್ಡಿಂಗ್,
52—14 ಬೊಂಬಾಯಿ.

ಬ್ರಾಂಚ್ ಆಫೀಸು:—
152—3 ಕಮರ್ಷಿಯಲ್ ಸ್ಟ್ರೀಟ್,
ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬಾಂಕ್, ಲಿಮಿಟೆಡ್ ಕೊ ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಸ್ಟರಾಗಿದೆ.

(ಸ್ಥಾಪಿತವಾದದ್ದು 1922ರಲ್ಲಿ)

		ರೂ.
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್ ಮೊಬಲಗು	—	27,670— 0—0
ಜಮೂಬಂದ ಠೇವಣಾತಿ	—	23,1509—13—9
ವಸೂಲಾದ ಕ್ಷೇಮನಿಧಿ	—	45,868—14—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡತಕ್ಕದ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ. 5-0-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೊಆಪರೇಟಿವ್ ರಿಜಿಸ್ಟ್ರಾರವರು ಲೆಕ್ಕ ಅಜಮಾಯಿಸಿಕೆ ಮಾಡುತ್ತಾರೆ.

ಪೈಸಿಡೆಂಟರು,
ಪಟ್ಟವಾಡ ದೇವೈಯ್ಯನವರು,
ರಾವ್ ಬಹದ್ದೂರ್.

ಹೈಜರರ್,
ಮನೆಯಪ್ಪಂಡ ಬೆಳ್ಯಪ್ಪನವರು.

ಸೆಕ್ರೆಟರಿ
ಸಿ. ಯನ್. ವೆಂಕಪ್ಪಯ್ಯನವರು, ಬಿ.ಎ., ಬಿ.ಎಲ್:

ತಾರೀಕು 1—7—1932.

ನೋಟೀಸು.

ಈ ಕೆಳಗಿನ ಮಹನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳವಲ್ಲಿ ನಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಕೊಡಗಿನ ಎಲ್ಲಾ ಭಾಗಗಳಿಗೆ—ಮೆ. ಮುಂಡಂಡ ಯಂ. ಬಿದ್ದಪ್ಪನವರು.

ಉತ್ತರ ಕೊಡಗಿಗೆ ಹೆಚ್. ಜಾರಿರ ಮೊದ್ದಯ್ಯನವರು,

ಸಬ್ ಏಜೆಂಟರುಗಳು.

ವೀರರಾಜಪೇಟೆ—ಮೆ. ಮಂಡೇಪಂಡ ಸೋಮ್ಮಯ್ಯನವರು, (ಖಾದಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೂದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜೆ. ಮುದ್ದಮ್ಮಯ್ಯನವರು,

ಮತ್ತು ಅರಮಣಮೂಡ ಪಿ ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜಿ. ಮೂದಮ್ಮಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮೊಚ್ಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್,
ಮಡಿಕೇರಿ.

ಮೂರಾಟಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನಲ್ಲಿಯೂ ಇರಬೇಕಾದ ಅಮಿತ ಜವಾಬ್ದಾರಿ ಪರಸ್ಪರ ಸಹಾಯಕ ಸಂಘದ ಮತ್ತು ಧವಸ ಭಂಡಾರದ ಉಪನಿಬಂಧನೆಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮ ಪ್ರಕಾರ ನಡಿಸಲು ಅತ್ಯವಶ್ಯವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರ್ಚಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾಮೀನು ಖರಾರು ಫಾರಮುಗಳೂ, ಸ್ಟೋರ್ ಕೀಪರ್ ಖರಾರು ಫಾರಮುಗಳೂ, ಓವರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮೂ ಖರ್ಚಿನ ರಿಜಸ್ಟರ್ ಪುಸ್ತಕಗಳೂ ಮತ್ತು ಚೆಕ್ ಪುಸ್ತಕಗಳೂ ನಮ್ಮಲ್ಲಿ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್,
"ಕೊಡಗು" ಆಫೀಸು,
ಮಡಿಕೇರಿ.

ಸರಕಾರಿ ಭದ್ರತೆ ಇರುವ

ಓರಿಯಂಟಲ್ ಜೀವ ವಿಮೆ ಕಂಪೆನಿ ಲಿಮಿಟೆಡ್.

(ಇಂಡಿಯಾದಲ್ಲಿ ಸ್ಥಾಪಿತವಾದದ್ದು 1874ರಲ್ಲಿ)

1930ನೇ ವರ್ಷದ ಫಲಿತಾಂಶಗಳು.

ಹೊಸ ವಿಮೆಗಳು—544 ಲಕ್ಷ ರೂಪಾಯಿ ವಿಮೆಯ 26,481 ಪಾಲಿಸಿಗಳು.

ನಿವ್ವಳ ಬಡ್ಡಿಯ ಉತ್ಪತ್ತಿ—52 ಲಕ್ಷ ರೂ. ಒಟ್ಟು ಪ್ರೀಮಿಯಮಿನ ವರಮಾನ—179 ಲಕ್ಷ ರೂ.
ವಿಮೆದಾರರಿಗೆ ಕೊಟ್ಟದ್ದು—3281 ಜನರಿಗೆ 81 ಲಕ್ಷ ರೂ. ಪಾಲಿಸಿದಾರರಿಗೆ ಸಾಲ—8013 ಜನರಿಗೆ 32 ಲಕ್ಷ ರೂ.
ಭಂಡವಾಳವು ಹೆಚ್ಚಾದದ್ದು—ಸುಮಾರು 10½ ಕೋಟಿ ರೂ.

ಜಾರಿಯಲ್ಲಿರುವ ಪಾಲಿಸಿಗಳು—ಬೋನಸ್ ಸಮೇತ ವಿಮೆ ಮಾಡಿರುವ 1,78,322 ಜನರಿಗೆ 38ಕೋಟಿ ರೂ.
ಮೇಲಿನ ಕೆಲಸಗಳೆಲ್ಲವೂ ಪ್ರೀಮಿಯಂ ಉತ್ಪತ್ತಿಯ ಶೇಕಡ 22.4ರಕ್ಕಿಂತ ಮಿಗಿಲಾದ ಕಮ್ಮಿ ಖರ್ಚಿನಲ್ಲಿಯೇ ನಡಿಸಲ್ಪಟ್ಟಿದ್ದಾಗಿದೆ.
ಈ ದೊಡ್ಡ ಇಂಡಿಯನ್ ಕಂಪೆನಿಯ ಕೆಲಸಗಳ ಪರಿಮಾಣವನ್ನು ಈ ಸಂಖ್ಯೆಗಳಿಂದಲೂ, ಇದರ **ಕಡಿಮೆ ಖರ್ಚಿನ ಮತ್ತು ಉತ್ತಮವಾದ ನಡಿಸುವಿಕೆಯಿಂದಲೂ** ಗೊತ್ತುಮಾಡಿಕೊಳ್ಳಬಹುದು.

ಪ್ರಪಂಚದ ದೊಡ್ಡ ಜೀವವಿಮೆ ಸಂಸ್ಥೆಗಳಲ್ಲಿ ಇಂಡಿಯನ್ ಕಂಪೆನಿಯೊಂದು ಸೇರಬೇಕೆಂದು ಇಚ್ಛಿಸುವ ಎಲ್ಲಾ ದೇಶಭಕ್ತರಾದ ಹಿಂದೀಯರ ಹೆಚ್ಚೆಚ್ಚು ಒತ್ತಾಸೆಯನ್ನು

ಓರಿಯಂಟಲ್ ಕಂಪೆನಿಯು ಪಡೆಯುತ್ತಿದೆ

ಎಂಬದು ಅದರ ಹಿಂದಿನ ದಾಖಲೆಗಳಿಂದಲೂ, ಮುಂದಿನ ಅಂದಾಜಿನಿಂದಲೂ ವ್ಯಕ್ತವಾಗುತ್ತದೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಬ್ರಾಂಚ್ ಸೆಕ್ರೆಟರಿ, ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೆರೇಡ್ ಬೆಂಗಳೂರು
ಅಥವಾ ಇನ್ಸ್‌ಪೆಕ್ಟರೇಟ್ ಆಫೀಸು, ಮಡಿಕೇರಿ.

ಅಥವಾ ಕಂಪೆನಿಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಕತ್ತಾ	ಕೌಲಾಲಂಪೂರು	ಪೆಂಬಾಸ	ರಂಗೂನು
ಅಹ್ಮದಾಬಾದು	ಕೊಲಂಬೊ	ಲಾಹೋರ್	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಢಕ್ಕಾ	ಲಕ್ನೌ	ಪಾಟ್ನಾ	ಸುಕ್ಕೂರು
ಅಲ್ಲಾಹಾಬಾದು	ಡೆಲ್ಲಿ	ಮದ್ರಾಸು	ಪೂನಾ	ತಿರುಚಿನಾಪಳ್ಳಿ
ಬೊಂಬಾಯಿ	ಡೌಲಗಾನ್	ಮಂಡಲೆ	ರಾಯಿಪುರ	ತಿರುವೆಂಡ್ರಮ್
ಭೋಪಾಲ್	ಕರಾಚಿ	ಮಡಿಕೇರಿ	ರಾಂಚಿ	ವಿಶಾಖಪಟ್ಣ [52—45

ಸಣ್ಣ ಹುಡುಗರ ಸಲುವಾಗಿ

ಡೋಂಗರೆ
ಇವರ
ಬಾಲಾಮೃತ.

ಈ ಬಾಲಾಮೃತವನ್ನು ಕೊಡುವುದರಿಂದ
ಮಕ್ಕಳ ಶಕ್ತಿಯೂ, ತೂಕವೂ ಹೆಚ್ಚುವವು ಮತ್ತು ಇದು ಮಧುರವಾಗಿರುವುದರಿಂದ ಮಕ್ಕಳು ಪ್ರೀತಿಯಿಂದ ತೆಗೆದುಕೊಳ್ಳುತ್ತವೆ.

ಕ್ರಯ: ಬಾಟ್ಲಿ 1ಕ್ಕೆ 14 ಆಣೆ, ಟಪ್ಪಾಲು ಖರ್ಚು 9 ಆಣೆ.

ಕೆ. ಟಿ. ಡೋಂಗರೆ ಕಂಪೆನಿ,
52—52 ಗಿರಿಗಾಂವ, ಮುಂಬಯಿ.

ಕಾಡುಗ ಬರೆದರೆ ಈಗಿನ ಕ್ಯಾಟಲಾಗು ಮೂಫಿಯಾಗಿ ಕಳುಹಿಸಲ್ಪಡುವುದು.



ಕೋವಿಗಳು, ಕತ್ತಿಗಳು, ಬರ್ಚಿಗಳು, ತೋಟಿಗಳು, ಕೇಪ್ಸುಗಳು, ಮದ್ದು ಮತ್ತು ಬೇಟೆಯ ಎಲಾ ಸಾಮಾನುಗಳು ಬಹು ಕಡಿಮೆ ದರದಲ್ಲಿ ದೊರೆಯುವವು.

GOOLAMHUSAIN ALLIBHOY & SONS LTD.,
Largest Importers of Firearms and Ammunition
Cheapest priced firm in India,
26—18 **210 Abdul Rehiman Street, BOMBAY.**

Printed & published by P. I. Belliappa at "Kodagu" Press Mercara for "Kodagu" Ltd